ನಲ್ವತ್ತು ಖುದ್ಸೀ ಹದೀಸ್‌ಗಳು

ಸಂಗ್ರಹ:
ಡಾ। ಇಝ್ಝುದ್ದೀನ್ ಇಬ್ರಾಹೀಮ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಸರ್ವ ಲೋಕಗಳ ಸೃಷ್ಟಿಕರ್ತ, ಪಾಲಕ ಪ್ರಭುವಾದ ಅಲ್ಲಾಹನ ವಾಣಿಯು ಪವಿತ್ರ ಕುರ್‌ಆನ್ ಮೂಲಕ ಸುರಕ್ಷಿತವಾಗಿವೆ ಎಂಬುದು ಒಂದು ವಾಸ್ತವಿಕತೆಯಾಗಿದೆ. ಅದೇ ರೀತಿ ಪ್ರವಾದಿವಚನ ಮತ್ತು ಪ್ರವಾದಿ ಚರ್ಯೆಗಳು (ಹದೀಸ್ ಗ್ರಂಥಗಳ ಮೂಲಕ) ಆ ಪವಿತ್ರ ಕುರ್‌ಆನಿನ ವ್ಯಾಖ್ಯಾನವಾಗಿ ಗುರುತಿಸಿಕೊಂಡಿವೆ ಎಂಬುದೂ ಅಷ್ಟೇ ಸತ್ಯ. ಈ ಹದೀಸ್ ಗ್ರಂಥಗಳಲ್ಲಿ ಪ್ರವಾದಿವರ್ಯರ(ಸ) ಮಾತುಗಳಲ್ಲದೆ ಕೆಲವದರಲ್ಲಿ ಅಲ್ಲಾಹನ ಮಾತುಗಳನ್ನು ನೇರವಾಗಿ ವರದಿ ಮಾಡಲಾಗಿದೆ. ಅವುಗಳನ್ನೇ 'ಕುದ್ಸಿ ಹದೀಸ್'ಗಳೆನ್ನಲಾಗುತ್ತದೆ. ಅವು ಕುರ್‌ಆನಿನ ವಾಣಿಯಲ್ಲದ ಕಾರಣ, ಅವುಗಳನ್ನು ಹದೀಸ್ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿವೆ.

ಡಾಕ್ಟರ್ ಇಝ್ಝುದ್ದೀನ್ ಇಬ್ರಾಹೀಮ್‌ರವರು ಹದೀಸ್ ಗ್ರಂಥಗಳಲ್ಲಿ ಅಡಕವಾಗಿರುವ ಆ ಕುದ್ಸಿ ಹದೀಸ್(ಪವಿತ್ರ ವಚನ)ಗಳನ್ನು ಸಂಗ್ರಹಿಸಿ ಪ್ರತ್ಯೇಕ ಕೃತಿಯ ರೂಪ ನೀಡಿದ್ದಾರೆ. ಆ ಉರ್ದು ಕೃತಿಯ ಕನ್ನಡ ಅನುವಾದವೇ '40 ಕುದ್ಸಿ ಹದೀಸ್‌ಗಳು'. ಅಲ್ಲಾಹನು ನೇರವಾಗಿ ಪ್ರವಾದಿಯವರ(ಸ) ಮೂಲಕ ತನ್ನ ದಾಸರಿಗೆ ನೀಡಿದ ಆದೇಶ ಮತ್ತು ನಿರ್ದೇಶಗಳು ಈ ಕೃತಿಯಲ್ಲಿ ಕಾಣಬಹುದಾಗಿದೆ..

ಪವಿತ್ರ ಕುರ್‌ಆನಿನ ಒಂದು ಸಾರಾಂಶದಂತಿರುವ ಈ ಕುದ್ಸಿ ಹದೀಸ್‌ಗಳ ಅಧ್ಯಯನವು ಒಂದರ್ಥದಲ್ಲಿ ನಮಗೆ ಜೀವನದ ಮೂಲಭೂತ ಸಂಗತಿಗಳನ್ನು ತಿಳಿಯುವಲ್ಲಿ ಸಹಕಾರಿಯಾಗುವುದೆಂದು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ

ಹದೀಸ್ ಕುದ್ಸೀ ಎಂಬುದು ಒಂದು ವಿಶಿಷ್ಟ ರೀತಿಯ ಪ್ರವಾದಿವಚನವಾಗಿದೆ. ಇದರಲ್ಲಿ ಸ್ವತಃ ಪ್ರವಾದಿ ಮುಹಮ್ಮದ್(ಸ)ರವರೇ ವರದಿಗಾರರಾಗಿದ್ದಾರೆ. ಅದನ್ನು ಅವರು ಅಲ್ಲಾಹನ ಕಡೆಯಿಂದ ವಿವರಿಸುತ್ತಾರೆ. ಇದಕ್ಕೆ 'ಹದೀಸ್ ಇಲಾಹಿಯ್ಯ' ಹಾಗೂ 'ಹದೀಸ್ ರಬ್ಬಾನಿಯ್ಯ' ಎಂಬ ಹೆಸರುಗಳೂ ಇವೆ.

ಅನುಕ್ರಮಣಿಕೆ

	ಹದೀಸ್ ಕುದ್ಸಿ: ಒಂದು ಪರಿಚಯ	07
01.	ನನ್ನ ಕರುಣೆ	13
02.	ದಾಸನ ನಿರಾಕರಣೆ ಮತ್ತು ಬೈಗುಳ	13
03.	ಬೆಳಿಗ್ಗೆ ಕೆಲವರು ವಿಶ್ವಾಸವಿರಿಸಿದರು; ಕೆಲವರು ಅವಿಶ್ವಾಸಿಗಳಾದರು	14
04.	ಕಾಲವನ್ನು ಹಳಿಯದಿರಿ	15
05.	ನನಗೂ ಶಿರ್ಕ್‌ಗೂ ಸಂಬಂಧವಿಲ್ಲ	16
06.	ಯೋಧ, ವಿದ್ವಾಂಸ ಮತ್ತು ದಾನಿಯ ದುರ್ಗತಿ	16
07.	ನನ್ನ 'ನಮಾಝ್' ದಾಸನನ್ನು ಕ್ಷಮಿಸಿದೆ	19
08.	'ಫಾತಿಹಾ'ದ ಪ್ರತಿ ಸೂಕ್ತಕ್ಕೂ ಅಲ್ಲಾಹನ ಉತ್ತರ	19
09.	ಪ್ರಥಮ ವಿಚಾರಣೆ ನಮಾಝ್‌ನದ್ದಾಗಿರುವುದು	21
10.	ಉಪವಾಸಿಗನಿಗೆ ಎರಡು ಸಂತೋಷ	22
11.	ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಅಲ್ಲಾಹನು ನಿನಗೆ ನೀಡುವನು	23
12.	ಔದಾರ್ಯ ತೋರುವವನಿಗೆ ಸುವಾರ್ತೆ	23
13.	ಖರ್ಜೂರದ ತುಂಡನ್ನು ದಾನ ಮಾಡಿಯಾದರೂ ನರಕಾಗ್ನಿಯಿಂದ ಪಾರಾಗಿರಿ	24
14.	ಅಲ್ಲಾಹನ ಸ್ಮರಣೆ ಮತ್ತು ಕರುಣೆಯ ವೈಶಾಲ್ಯ	26
15.	ಅಲ್ಲಾಹನ ಸ್ಮರಣೆಯ ಮಹತ್ವ	28
16.	ಅಲ್ಲಾಹನ ಕರುಣೆ ಅಪಾರವಾಗಿದೆ	29
17.	ಅಲ್ಲಾಹನು ನಿರಪೇಕ್ಷನು	30
18.	ಜನರ ಹಕ್ಕುಗಳ ಮಹತ್ವ	32
19.	ಮಹಾನತೆಯು ದೇವನ ಹಕ್ಕಾಗಿದೆ	34
20.	ಸಂಧಾನದ ಮೂಲಕ ಮೋಕ್ಷ	34
21.	ಮೂರು ವಿಧದ ಜನರ ವಿರುದ್ಧವಾಗಿ ಅಲ್ಲಾಹನ ದಾವೆ	35
22.	ತನ್ನನ್ನು ನಿಕೃಷ್ಟನೆಂದು ಭಾವಿಸಬಾರದು	35

23. ಪರಸ್ಪರ ಪ್ರೀತಿಸುವವರು ಅಲ್ಲಾಹನ ನೆರಳಲ್ಲಿ 36
24. ಅಲ್ಲಾಹನನ್ನು ಪ್ರೀತಿಸುವವನು ಬಹು ಜನಪ್ರಿಯನು 37
25. ಅಲ್ಲಾಹನ ಆಪ್ತರನ್ನು ದ್ವೇಷಿಸುವವನ ವಿರುದ್ಧ ಯುದ್ಧ ಘೋಷಣೆ 38
26. ಈರ್ಷ್ಯೆಗೆ ಅರ್ಹ ಮಿತ್ರ 39
27. ಹುತಾತ್ಮನ ಸ್ಥಾನ 40
28. ಆತ್ಮಹತ್ಯೆ ಮಾಡಿಕೊಳ್ಳುವವನಿಗೆ ಸ್ವರ್ಗ ನಿಷಿದ್ಧ 41
29. ತಾಳ್ಮೆಯ ಪ್ರತಿಫಲ ಸ್ವರ್ಗವಾಗಿದೆ 42
30. ಅಲ್ಲಾಹನ ಭೇಟಿ ಬಯಸುವವನು 42
31. ಕ್ಷಮಿಸುವುದು ಕೇವಲ ಅಲ್ಲಾಹನ ಅಧಿಕಾರವಾಗಿದೆ 44
32. ಅಲ್ಲಾಹನನ್ನು ಬಹಳ ಭಯಪಡುವವನ ಪ್ರತಿಫಲ 44
33. ತೌಬಾ ಮಾಡುವವನನ್ನು ಅಲ್ಲಾಹ್ ಕ್ಷಮಿಸುತ್ತಾನೆ 45
34. ಪಾಪಿಯು ಅಲ್ಲಾಹನ ಬಗ್ಗೆ ನಿರಾಶನಾಗಬಾರದು 46
35. ಬೇಡುವವನಿಗೆ ನೀಡಲಾಗುವುದು 47
36. ಮುಹಮ್ಮದ್(ಸ)ರ ಶಿಫಾರಸ್ಸು 48
37. ಸ್ವರ್ಗದ ಅಜ್ಞಾತ ಅನುಗ್ರಹಗಳು 52
38. ಸ್ವರ್ಗವು ಸಂಕಷ್ಟಗಳಿಂದಲೂ ನರಕವು
ಸುಖ-ಸಂತೋಷಗಳಿಂದಲೂ ಆವರಿಸಲ್ಪಟ್ಟಿದೆ 52
39. ಸ್ವರ್ಗ-ನರಕಗಳನ್ನು ತುಂಬಿಸುವುದು ನನ್ನ ಕೆಲಸ 54
40. ಅಲ್ಲಾಹನ ಸಂಪ್ರೀತಿ: ಸ್ವರ್ಗವಾಸಿಗಳ ಅತಿದೊಡ್ಡ ಅನುಗ್ರಹ 55

ಹದೀಸ್ ಕುದ್ಸೀ: ಒಂದು ಪರಿಚಯ

ಹದೀಸ್ ಕುದ್ಸೀ ಎಂಬುದು ಒಂದು ವಿಶಿಷ್ಟ ರೀತಿಯ ಪ್ರವಾದಿವಚನವಾಗಿದೆ. ಇದರಲ್ಲಿ ವರದಿಗಾರರು ಪ್ರವಾದಿ ಮುಹಮ್ಮದ್(ಸ) ಆಗಿದ್ದಾರೆ. ಅದನ್ನು ಅವರು ಅಲ್ಲಾಹನ ಕಡೆಯಿಂದ ವಿವರಿಸುತ್ತಾರೆ. ಆದ್ದರಿಂದ ಅದಕ್ಕೆ ಉನ್ನತ ಸ್ಥಾನವಿದೆ. ಇದಕ್ಕೆ 'ಹದೀಸ್ ಇಲಾಹಿಯ್ಯ' ಹಾಗೂ 'ಹದೀಸ್ ರಬ್ಬಾನಿಯ್ಯ' ಎಂಬ ಹೆಸರುಗಳೂ ಇವೆ. ಅಲ್ಲಾಹನು 'ಇಲ್ಹಾಮ್' (ಗುಪ್ತ ಸೂಚನೆ) ಅಥವಾ ಕನಸಿನಲ್ಲಿ ವಿಷಯವನ್ನು ಪ್ರವಾದಿಯವರಿಗೆ(ಸ) ತಿಳಿಸುತ್ತಾನೆ. ಅವರು ತಮ್ಮ ಮಾತಿನಲ್ಲಿ ಅದನ್ನು ಹೊರಗೆಡಹುತ್ತಾರೆ. ಆದರೆ ಅದನ್ನು ಕುರ್‌ಆನಿನಂತೆ ಅಲ್ಲಾಹನ ವಾಣಿ ಎನ್ನುವಂತಿಲ್ಲ.

'ಹದೀಸ್ ಕುದ್ಸೀ'ಗೆ ಕುರ್‌ಆನಿನ ಸ್ಥಾನವಿಲ್ಲ. ಏಕೆಂದರೆ ಕುರ್‌ಆನಿನ ಪ್ರತಿಯೊಂದು ಪದವೂ ನೇರವಾಗಿ ಅಲ್ಲಾಹನಿಂದಲೇ ಬಂದಿರುತ್ತದೆ. ಕುರ್‌ಆನ್ ಜಿಬ್ರೀಲ್(ಅ)ರ ಮೂಲಕ ಅವತೀರ್ಣಗೊಂಡಿತು. ಅದು 'ಲೌಹುಲ್ ಮಹ್‌ಫೂಝ್' ಅಂದರೆ ಸುರಕ್ಷಿತ ಗ್ರಂಥದಿಂದ ವಿಶಿಷ್ಟ ರೀತಿಯಲ್ಲಿ ಬಂದಿತು.

ಕುರ್‌ಆನ್ ಮತ್ತು ಹದೀಸ್ ಕುದ್ಸೀಯ ನಡುವಿನ ವ್ಯತ್ಯಾಸದಿಂದಾಗಿ ಕೆಲವು ತತ್ವಗಳುಂಟಾದುವು. ಅವುಗಳಲ್ಲಿ ಪ್ರಸಿದ್ಧವಾದವುಗಳು ಹೀಗಿವೆ:

ಕುರ್‌ಆನನ್ನು ನಮಾಝ್‌ನಲ್ಲಿ ಪಠಿಸಲಾಗುತ್ತದೆ. ಆದರೆ ಕುದ್ಸೀ ಹದೀಸ್‌ಗಳನ್ನು ನಮಾಝ್‌ನಲ್ಲಿ ಪಠಿಸುವಂತಿಲ್ಲ. ಲೈಂಗಿಕ ಅಶುದ್ಧಿಯಿರುವವರು, ಮುಟ್ಟು ಅಥವಾ ಬಾಣಂತನದಲ್ಲಿರುವವರು ಕುರ್‌ಆನನ್ನು ಸ್ಪರ್ಶಿಸುವಂತಿಲ್ಲ. ಆದರೆ ಹದೀಸ್ ಕುದ್ಸೀಯನ್ನು ಮುಟ್ಟುವುದರಲ್ಲಿ ದೋಷವಿಲ್ಲ. ಕುರ್‌ಆನನ್ನು ನಿರಾಕರಿಸುವವರು ಕಾಫಿರ್ (ಸತ್ಯನಿಷೇಧಿ, ಧಿಕ್ಕಾರಿ) ಎನಿಸಿಕೊಳ್ಳುತ್ತಾರೆ. ಆದರೆ ಹದೀಸ್ ಕುದ್ಸೀಯನ್ನು ನಿರಾಕರಿಸುವವರು ಕಾಫಿರರಾಗುವುದಿಲ್ಲ. ಹದಿಸ್ ಕುದ್ಸೀಯು ಕುರ್‌ಆನಿನಂತೆ ಪವಾಡವಲ್ಲ.

ಹದೀಸ್ ಕುದ್ಸೀಯ ಕುರಿತು ಪ್ರಾಚೀನ ವಿದ್ವಾಂಸರು ನಾಲ್ಕು ವಿಷಯಗಳನ್ನು ಪರಿಗಣಿಸಿದ್ದಾರೆ.

1. ಹದೀಸ್ ಕುದ್ಸೀ ಮತ್ತು ಹದೀಸ್ ನಬವಿ: ಹದೀಸ್ ನಬವಿಯ ಸನದು ಪ್ರವಾದಿಯವರಲ್ಲಿ(ಸ) ಅಂತ್ಯಗೊಳ್ಳುತ್ತದೆ. ಆದರೆ ಹದೀಸ್ ಕುದ್ಸಿಯ ಸನದು ಅಲ್ಲಾಹನ ಕಡೆಗಿರುತ್ತದೆ. ಹದೀಸ್ ಕುದ್ಸೀಯಲ್ಲಿ ಅಲ್ಲಾಹನ ಮಾತಿರುತ್ತದೆ. ಹೆಚ್ಚಿನ ವೇಳೆ ಅಲ್ಲಾಹನೇ ದಾಸರೊಂದಿಗೆ ಮಾತನಾಡುತ್ತಾನೆ. ಉದಾ: "ಓ ನನ್ನ ದಾಸರೇ! ನಾನು ನನ್ನ ಮೇಲೆ ಅಕ್ರಮವೆಸಗುವುದನ್ನು ನಿಷೇಧಿಸಿದ್ದೇನೆ. ನಿಮ್ಮ ನಡುವೆಯೂ ನಿಷೇಧಿಸಿದ್ದೇನೆ. ಆದ್ದರಿಂದ ನೀವು ಪರಸ್ಪರ ಅಕ್ರಮವೆಸಗಬೇಡಿ."

2. ಹದೀಸ್ ಕುದ್ಸೀ ಮತ್ತು ಕುರ್‌ಆನ್: ಮುಲ್ಲಾ ಅಲೀ ಕಾರೀಯವರು ಹೀಗೆ ಬರೆಯುತ್ತಾರೆ, "ಪವಿತ್ರ ಕುರ್‌ಆನಿನ ಪದಗಳೂ ಅಕ್ಷರಗಳೂ ಅಲ್ಲಾಹನ ವತಿಯಿಂದ ಅವತೀರ್ಣಗೊಂಡದ್ದಾಗಿವೆ. ಶತಮಾನಗಳು ಕಳೆದರೂ ಪರಂಪರೆಯಿಂದ ಅದು ಸಾಬೀತಾಗಿದೆ. ಇನ್ನು ಹದೀಸ್ ಕುದ್ಸೀ, ಅದು ಓರ್ವನೇ ಸಹಾಬಿಯ ವರದಿ (ಆಹಾದ್) ಆಗಿದೆ. ಇತರ ಹದೀಸ್‌ಗಳಿಗೆ ನಿಗದಿಯಾದ ನಿಯಮಗಳೇ ಹದೀಸ್ ಕುದ್ಸೀಗೂ ಅನ್ವಯಿಸುತ್ತದೆ. ಅದರಿಂದಲೇ ಕೆಲವು ಹದೀಸ್‌ಗಳು ಸಹೀಹ್, ಇನ್ನು ಕೆಲವು ಹಸನ್ ಹಾಗೂ ಮತ್ತೆ ಕೆಲವು ದುರ್ಬಲವೆಂದು ಪರಿಗಣಿಸಲ್ಪಡುವುದು."

3. ಹದೀಸ್ ಕುದ್ಸೀಯ ಸ್ವರೂಪ: ಇದರ ಅರ್ಥ-ತಾತ್ಪರ್ಯಗಳ ಕುರಿತು ವಿದ್ವಾಂಸರಲ್ಲಿ ಎರಡಭಿಪ್ರಾಯಗಳಿವೆ. ಅರ್ಥ-ತಾತ್ಪರ್ಯಗಳೆರಡೂ ಅಲ್ಲಾಹನ ವತಿಯಿಂದಾಗಿದೆಯೆಂದು ಒಂದು ವರ್ಗದ ವಿದ್ವಾಂಸರು ಹೇಳುತ್ತಾರೆ. ಅವರು ನೀಡುವ ಆಧಾರವೇನೆಂದರೆ, ಹದೀಸ್ ಕುದ್ಸೀ ದೇವನ ಕಡೆಗೆ ಸಲ್ಲುತ್ತದೆ. ಆದ್ದರಿಂದಲೇ ಅದಕ್ಕೆ ಆ ಹೆಸರು ಬಂದಿದೆ. ಅದಕ್ಕೆ ರಬ್ಬಾನೀ, ಇಲಾಹೀ ಎಂಬ ಹೆಸರುಗಳೂ ಇವೆ. ಈ ಹದೀಸ್‌ಗಳಲ್ಲಿ ಸಂಬೋಧನಾ ಶೈಲಿಯು ಮಾನವನೊಂದಿಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಇನ್ನೊಂದು ವರ್ಗದ ವಿದ್ವಾಂಸರ ಅಭಿಪ್ರಾಯದಲ್ಲಿ ಹದೀಸ್‌ನ ಅರ್ಥ-ತಾತ್ಪರ್ಯಗಳು ದೇವನ ವತಿಯಿಂದಲೇ ಆಗಿದೆ. ಆದರೆ ಅದರಲ್ಲಿ ಮಾತು ಪ್ರವಾದಿಯವರ(ಸ) ಪದಗಳಾಗಿವೆ. ಪ್ರವಾದಿಯವರು(ಸ) ಇದನ್ನು ಅಲ್ಲಾಹನ ಆದೇಶದ ಮೇರೆಗೇ ಹೇಳಿದ್ದಾರೆ. ಆದ್ದರಿಂದ ಈ ಹದೀಸ್‌ನ ವಾಕ್ಯಗಳನ್ನು ಪವಾಡವೆನ್ನುವಂತಿಲ್ಲ, ಅವುಗಳ ವರದಿಗಳು ಅರ್ಥದಲ್ಲಿ ಸರಿಯಾಗಿದ್ದರೂ ವರದಿಗಾರಿಕೆಯಲ್ಲಿ ಭಿನ್ನತೆಯಿರಬಹುದು.

ಹದೀಸ್ ಕುದ್ಸೀಯ ಕುರಿತ ಈ ಭಿನ್ನತೆಗಳಿಗೆ ಹೆಚ್ಚಿನ ಮಹತ್ವವೇನೂ ಇಲ್ಲ, ಅದರ ಅರ್ಥ-ತಾತ್ಪರ್ಯಗಳು ಅಲ್ಲಾಹನ ವತಿಯಿಂದಲೇ ಆಗಿದೆ ಎಂಬ ಬಗ್ಗೆ ಒಮ್ಮತವಿದೆ. ಆದರೆ ಅದರ ಪದಗಳ ಸುರಕ್ಷತೆ ಮತ್ತು ಅದರ ದೈವಿಕತೆಯು ಸಾಬೀತಾಗಿಲ್ಲ, ಈ ಐಕ್ಯ

ಬಿಂದುವಿನ ಬಳಿಕ ಉಳಿಯುವ ವಿಷಯವೇನೆಂದರೆ ಹದೀಸ್‌ನ ವಿವರಣೆಗಳು ಪ್ರವಾದಿಯವ ರಿಗೆ ಇಲ್ಹಾಮ್‌ನ ಮೂಲಕ ಲಭಿಸಿದೆಯೋ ಅಥವಾ ದೇವೇಚ್ಛೆಯಿಂದ ಅವರು ಹೇಳಿದರೋ ಅಥವಾ ಅವು ಸ್ವಯಂ ಅವರ ಬಾಯಿಯಿಂದ ಹೊರಟಿವೆಯೋ ಎಂಬ ಕುರಿತಾಗಿದೆ.

4. ಹದೀಸ್ ಕುದ್ಸೀಯ ವರದಿಗಾರಿಕೆ ಮತ್ತು ವಿವರಣಾ ಶೈಲಿ: ಈ ಹದೀಸ್‌ನ ವರದಿಗಾರಿಕೆಯ ಕುರಿತು ವಿದ್ವಾಂಸರು ಎರಡು ವಿಧಾನಗಳನ್ನು ಕಂಡು ಹಿಡಿದಿದ್ದಾರೆ. ಹಳೆಯ ಕಾಲದ ವಿದ್ವಾಂಸರ ಪ್ರಕಾರ, ಹದೀಸ್‌ನ ಆರಂಭದಲ್ಲಿ, 'ಪ್ರವಾದಿಯವರು(ಸ) ಅಲ್ಲಾಹನಿಂದ ವರದಿ ಮಾಡುತ್ತಾರೆ' ಎಂಬುದು ಅಧಿಕೃತ ರೂಪವಾಗಿದೆ. ಎರಡನೆಯ ರೂಪವು ಅಲ್ಲಾಹನು ಪ್ರವಾದಿಯವರ ಮೂಲಕ ಹೇಳುತ್ತಾನೆ ಎಂಬುದಾಗಿದೆ.

ಈ ಎರಡೂ ವಾಕ್ಯಗಳ ತಾತ್ಪರ್ಯ ಒಂದೇ. ಹದೀಸ್ ಕುದ್ಸೀಗಳನ್ನು ಅನುಸರಿಸುವವರಿಗೆ ಹದೀಸ್ ಗ್ರಂಥಗಳಲ್ಲಿ ಇನ್ನೂ ಕೆಲವು ವಿಧಾನಗಳಿರುವುದನ್ನು ಕಾಣಬಹುದು. ಉದಾ:

(ಅ) ಕೆಲವೊಮ್ಮೆ ಹದೀಸ್‌ನ ಆರಂಭವು - 'ಅಲ್ಲಾಹನ ಸಂದೇಶವಾಹಕರು ಹೇಳಿದರು: ಅಲ್ಲಾಹ್ ಹೇಳುತ್ತಾನೆ' ಎಂಬ ಪದಗಳಿಂದಾಗುತ್ತದೆ. ಅನಂತರ ಹದೀಸ್‌ನ ವಾಕ್ಯಗಳು ಬರುತ್ತವೆ.

(ಆ) ಇನ್ನು ಕೆಲವೊಮ್ಮೆ ಹದೀಸ್‌ನಲ್ಲಿ ಅಲ್ಲಾಹನ ಮಾತು ಹೇಳಿಕೆಯ ರೂಪದಲ್ಲಿರುವುದಿಲ್ಲ, ಆದರೆ ಅದು ಹದೀಸ್ ಕುದ್ಸೀ ಎಂದು ತೆರೆಮರೆಯಿಂದ ವ್ಯಕ್ತವಾಗುತ್ತದೆ. ಉದಾ: ಮುಸ್ಲಿಮ್‌ನ ಒಂದು ಹದೀಸ್ ಹೀಗಿದೆ:

"ಅಲ್ಲಾಹನು ತನ್ನ ಸೃಷ್ಟಿಗಳನ್ನು ಉಂಟು ಮಾಡಿದ ಬಳಿಕ ತನ್ನ ಬಳಿಯಲ್ಲಿರುವ ಗ್ರಂಥದಲ್ಲಿ 'ನನ್ನ ದಯೆಯು ನನ್ನ ಕೋಪವನ್ನು ಆವರಿಸಿರುವುದು' ಎಂದು ಬರೆದನು."

(ಇ) ಸಂಪೂರ್ಣ ಹದೀಸ್ ಆರಂಭದಿಂದ ಅಂತ್ಯದ ವರೆಗೆ ಕುದ್ಸೀ ಆಗಿರದೆ, ಅದರ ಒಂದು ಅಂಶ ಮಾತ್ರ ಕುದ್ಸೀ ಆಗಿರುವುದು. ಸೂಚ್ಯವಾಗಿ ಇದು ಅಲ್ಲಾಹನ ಮಾತಾಗಿರುವುದು. ಇದರಲ್ಲಿ ಮೊದಲು ಪ್ರವಾದಿಯವರ(ಸ) ಮಾತಿರುವುದು. ಅನಂತರ ನಸಾಈಯವರ ಹದೀಸ್‌ನಲ್ಲಿ (ನಂಬ್ರ 7) ಇರುವಂತೆ ಅಲ್ಲಾಹನ ಮಾತಿರುವುದು.

ಮೇಲಿನ ವಿವರಣೆಯ ಬೆಳಕಿನಲ್ಲಿ, ಈ ನಾಲ್ಕೂ ರೂಪಗಳ ಹಾಗೂ ಮೊದಲೆರಡು ಪ್ರಸಿದ್ಧ ರೂಪಗಳ ಮಧ್ಯೆ ಹೊಂದಾಣಿಕೆ ಮಾಡಬಹುದು. ಅದು ಹೇಗೆಂದರೆ, ಮೊದಲೆರಡು ಸ್ಥಿತಿಗಳು ಆರಂಭದಿಂದ ಕೊನೆಯ ವರೆಗೆ ಕುದ್ಸೀ ಆಗಿರುತ್ತದೆ ಮತ್ತು

'ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು: ಅಲ್ಲಾಹನು ಹೇಳುತ್ತಾನೆ' ಎಂಬುದೂ ಕುದ್ಸಿಯೇ ಆಗಿವೆ. ಇವುಗಳ ಹೊರತು ಉಳಿದವು, ಆರಂಭದಿಂದ ಅಂತ್ಯದ ವರೆಗೆ ಕುದ್ಸೀ ಹದೀಸ್‌ಗಳಲ್ಲಿ ಸೇರುವುದಿಲ್ಲ. ಆದರೆ ಈ ತರದ ಎಲ್ಲ ಹದೀಸ್‌ಗಳನ್ನು ಹದೀಸ್ ಕುದ್ಸೀ ಎನ್ನಲು ಕಾರಣ ಅವುಗಳಲ್ಲಿ ಒಂದಲ್ಲ ಒಂದು ವಾಕ್ಯ ಅಲ್ಲಾಹನ ಮಾತಾಗಿರುವುದಾಗಿದೆ.

ಹದೀಸ್ ಕುದ್ಸೀಯ ವಿಷಯಗಳು

ಹದೀಸ್ ಕುದ್ಸೀಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಅವುಗಳಲ್ಲಿರುವ ವಿಷಯವೂ ಸೀಮಿತವಾಗಿದೆ. ಈ ಹದೀಸ್‌ಗಳ ಮೂಲವಾಗಿರುವ ಅಲ್ಲಾಹನ ಮಾತಿಗೆ ವಿಶಿಷ್ಟ ವರ್ಣ ಮತ್ತು ಶೈಲಿಯಿದೆ. ಅಲ್ಲಾಹನ ಮಾತಿಗೆ ಹೊಂದಿಕೊಂಡಿರುವ ವಿಶಿಷ್ಟ ವಿಷಯಗಳೂ ಇವೆ. ಅವುಗಳನ್ನು ಐದು ಶೀರ್ಷಿಕೆಗಳಲ್ಲಿ ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು–

(1) ತೌಹೀದ್ ಅಥವಾ ಏಕದೇವ ವಿಶ್ವಾಸ: ಸಂಶಯಗಳು ಮತ್ತು ಬಹುದೇವತ್ವ ವಿಶ್ವಾಸಗಳಿಂದ ಮನಸ್ಸನ್ನು ಶುದ್ಧಗೊಳಿಸುವುದು. ಸೃಷ್ಟಿಕರ್ತನ ಮಹಾನತೆಯನ್ನು ಸ್ಥಾಪಿಸುವುದು, ಪರಿಪೂರ್ಣತೆ ಮತ್ತು ಸೌಂದರ್ಯದ ಗುಣಗಳನ್ನು ಅವನಿಗೆ ಸೀಮಿತಗೊಳಿಸುವುದು, ಸಂಕಲ್ಪಶುದ್ಧಿ ಮತ್ತು ನಿಸ್ಪೃಹ ಹೃದಯದೊಂದಿಗೆ ಅಲ್ಲಾಹನೊಂದಿಗೆ ಗಾಢ ಪ್ರೀತಿ – ಈ ಎಲ್ಲ ವಿಷಯಗಳ ಬಗ್ಗೆಯೂ ಚರ್ಚಿಸಿರುವುದು.

(2) ಆರಾಧನೆಗಳಲ್ಲಿ ಸೌಂದರ್ಯ: ಫರ್ಝ್ ಮತ್ತು ನಫಿಲ್ ಇಬಾದತ್‌ಗಳು, ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್, ದಿಕ್ರ್–ತಸ್ಬೀಹ್‌ಗಳನ್ನು ನಿಸ್ಪೃಹತೆ, ಗಮನ ಮತ್ತು ಆತ್ಮಾವಲೋಕನದ ನಿಯತ್ತಿನೊಂದಿಗೆ ನಿರ್ವಹಿಸಲು ಪ್ರೇರಣೆ ಮತ್ತು ಅದರ ಅಗತ್ಯ.

(3) ಉತ್ಕೃಷ್ಟ ಚಾರಿತ್ರ್ಯ: ಉತ್ಕೃಷ್ಟ ಚಾರಿತ್ರ್ಯ, ಒಳಿತು ಮತ್ತು ಕುಟುಂಬ ಸಂಬಂಧ ಬಲಪಡಿಸುವುದು, ಸೃಷ್ಟಿಗಳೊಂದಿಗೆ ಸದ್ವರ್ತನೆ, ಸಜ್ಜನರೊಂದಿಗೆ ಪ್ರೀತಿ, ಒಳಿತಿನ ಆದೇಶ ಮತ್ತು ಕೆಡುಕಿನ ನಿರ್ಮೂಲನ ಇತ್ಯಾದಿಗಳಿಗೆ ಪ್ರೇರೇಪಣೆ.

(4) ಅಲ್ಲಾಹನ ಮಾರ್ಗದಲ್ಲಿ ಆತ್ಮಾರ್ಪಣೆ: ಅಲ್ಲಾಹನ ತೀರ್ಮಾನಕ್ಕೆ ಪೂರ್ಣ ಬದ್ಧತೆ, ಅಲ್ಲಾಹನ ಭೇಟಿಯ ಅದಮ್ಯ ಬಯಕೆ, ಸರ್ವಸ್ವವನ್ನೂ ದೇವಾನುಸರಣೆಗೆ ಅರ್ಪಿಸುವುದು ಇತ್ಯಾದಿಗಳ ಉಪದೇಶ.

(5) ವಿಚಾರಣಾ ದಿನಕ್ಕೆ ಸಿದ್ಧತೆ: ರಕ್ಷೆ-ಶಿಕ್ಷೆಯ ಭಯ, ನಿರಂತರ ತೌಬಾ-ಇಸ್ತಿಗ್‌ಫಾರ್, ಆಶೆ ಮತ್ತು ಭಯವಿರಿಸುವುದು, ಸತ್ಕರ್ಮಗಳನ್ನು ವೃದ್ಧಿಸುವ ಮೂಲಕ ಅಲ್ಲಾಹನ ಸಂಪ್ರೀತಿ ಗಳಿಸುವುದು ಹಾಗೂ 'ವಸೀಲ' (ಶಿಫಾರಸ್ಸು-ಮಧ್ಯಸ್ಥಿಕೆ) ಹುಡುಕುವುದು, ಸಕಲ ಸೃಷ್ಟಿಗಳನ್ನೂ ಆವರಿಸಿಕೊಂಡಿರುವ ಅಲ್ಲಾಹನ ಕರುಣೆ ಮತ್ತು ಪ್ರೀತಿಯ ಬಗ್ಗೆ ದೃಢವಾದ ನಂಬಿಕೆ ಇತ್ಯಾದಿ ಎಲ್ಲದಕ್ಕೂ ಪ್ರೋತ್ಸಾಹ ನೀಡುವುದು.

ಈ ಎಲ್ಲ ವಿಷಯಗಳು ಮಾನವನ ಮೂಲಭೂತ ವಿಶ್ವಾಸ-ನಂಬಿಕೆಗಳು, ಆರಾಧನಾ ಕರ್ಮಗಳು ಮತ್ತು ವ್ಯಾವಹಾರಿಕ ಸಂಬಂಧಗಳ ಕುರಿತು ಅಲ್ಲಾಹನ 'ಉಲೂಹಿಯ್ಯತ್' ಮತ್ತು 'ಉಬೂದಿಯ್ಯತ್'ನ (ದೇವತ್ವ ಮತ್ತು ದಾಸ್ಯತ್ವ) ಕುರಿತಾದ ವಿವರಣೆಯನ್ನು ಹದೀಸ್ ಕುದ್ಸಿಗಳು ಸ್ಪಷ್ಟಪಡಿಸುತ್ತವೆ. ಇನ್ನು ಶರೀಅತ್‌ನ ಇನ್ನಿತರ ವಿಧಿ-ನಿಯಮಗಳು ಮತ್ತು ಆಜ್ಞೆ-ಆದೇಶಗಳಿಗೆ ಸಂಬಂಧಿಸಿ ಚರ್ಚಿಸಿರುವುದು ಬಹಳ ಕಡಿಮೆ.

ಅಭಿಸಂಬೋಧನಾ ಶೈಲಿ

ಹದೀಸ್ ಕುದ್ಸಿಯ ಅಭಿಸಂಬೋಧನಾ ಶೈಲಿಯು ಅದರ ವಿಷಯಗಳಿಗೆ ಅನುಸಾರವಾಗಿರುತ್ತದೆ. ಅದರಲ್ಲಿ ಕೆಲವೊಮ್ಮೆ ಅಲ್ಲಾಹನು ತನ್ನ ದಾಸರನ್ನು ಕೂಗಿ ಕರೆಯುತ್ತಾನೆ. ತನ್ನ ದಾಸನ ಸುಧಾರಣೆ ಮತ್ತು ಮಾರ್ಗದರ್ಶನಕ್ಕಾಗಿ ಕೆಲವೊಮ್ಮೆ ಗುಪ್ತವಾಗಿ ಮಾತನಾಡುತ್ತಾನೆ. ಅದರಿಂದ ಸೃಷ್ಟಿಕರ್ತನ ಮತ್ತು ದಾಸನ ಸಂಬಂಧವು ಬಲಿಷ್ಠವಾಗುತ್ತದೆ. ವಾಸ್ತವದಲ್ಲಿ ಈ ಹದೀಸ್‌ಗಳಲ್ಲಿ ದೈವಿಕ ವಾಕ್ ಶೈಲಿ ಮತ್ತು ಆಧ್ಯಾತ್ಮಿಕ ವರ್ಣವು ಮೇಳೈಸಿರುತ್ತದೆ. ಇದು ಅತ್ಯಂತ ಪರಿಣಾಮಕಾರಿಯೂ ಹೃದಯವನ್ನು ನಾಟುವಂತಹದ್ದೂ ಆಗಿರುತ್ತದೆ.

ಕೆಲವು ಸಂಗ್ರಹಕಾರರು ಆಧ್ಯಾತ್ಮಿಕತೆ ಮತ್ತು ಸೂಫಿಸಮ್‌ಗೆ ಸಂಬಂಧಿಸಿ ಹದೀಸ್ ಕುದ್ಸಿಗಳಿಂದ ಬಹಳಷ್ಟು ಆಧಾರಗಳನ್ನು ಪಡೆದಿದ್ದಾರೆ. ಇನ್ನು ಕೆಲವು ಸಂಗ್ರಹಕಾರರು ಯಾವುದೇ ಸಂಶೋಧನೆ ಮಾಡದೆ, ವಿವೇಚನೆ ನಡೆಸದೆ ಅನೇಕ ದುರ್ಬಲ ಹದೀಸ್‌ಗಳನ್ನು ಸೇರಿಸಿದ್ದಾರೆ. ಮಾತ್ರವಲ್ಲ, ಹೆಚ್ಚಿನ ವೇಳೆ ಕೃತಕ ಹಾಗೂ ಸುಳ್ಳು ಹದೀಸ್‌ಗಳನ್ನೂ ತುಂಬಿಸಿಕೊಂಡಿದ್ದಾರೆ. ವಸ್ತುತಃ ಸಹೀಹ್ ಮತ್ತು ಹಸನ್ ಹದೀಸ್‌ಗಳೇ ಸಾಕಷ್ಟಿರುವಾಗ ಅವರು ಹಾಗೆ ಮಾಡುವ ಅಗತ್ಯವೇ ಇರಲಿಲ್ಲ.

❖ ❖ ❖ ❖

ما قلّ وكفى خيرٌ مما كثر وألهى

1. ನನ್ನ ಕರುಣೆ

عَنْ أَبِيْ هُرَيْرَةَ رَضِيَ اللّٰهُ عَنْهُ قَالَ ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : لَمَّا قَضَى اللّٰهُ الْخَلْقَ ، كَتَبَ فِيْ كِتَابِهِ عَلٰى نَفْسِهِ فَهُوَ مَوْضُوْعٌ عِنْدَهُ " إِنَّ رَحْمَتِيْ تَغْلِبُ غَضَبِيْ "

رواه مسلم (كذلك البخارى والنسائى وابن ماجه)

ಅಬೂ ಹುರೈರಾ(ರ) ಅವರಿಂದ ವರದಿ. ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು:

ಅಲ್ಲಾಹನು ತನ್ನ ಸೃಷ್ಟಿಯನ್ನು ಉಂಟು ಮಾಡಲು ತೀರ್ಮಾನಿಸಿದಾಗ ತನ್ನ ಬಳಿಯಲ್ಲಿರುವ ತನ್ನ ಗ್ರಂಥದಲ್ಲಿ ಹೀಗೆ ಬರೆದನು, “ನನ್ನ ಕರುಣೆಯು ನನ್ನ ಕ್ರೋಧವನ್ನು ಆವರಿಸಿರುವುದು.”

(ಬುಖಾರಿ, ಮುಸ್ಲಿಮ್, ನಸಾಈ, ಇಬ್ನುಮಾಜಃ)

2. ದಾಸನ ನಿರಾಕರಣೆ ಮತ್ತು ಬೈಗುಳ

عَنْ أَبِيْ هُرَيْرَةَ رَضِيَ اللّٰهُ عَنْهُ ، عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ : قَالَ اللّٰهُ تَعَالٰى " كَذَّبَنِيْ ابْنُ آدَمَ ، وَلَمْ يَكُنْ لَّهُ ذٰلِكَ ، وَشَتَمَنِيْ وَلَمْ يَكُنْ لَّهُ ذٰلِكَ ، فَأَمَّا تَكْذِيْبُهُ إِيَّايَ فَقَوْلُهُ : لَنْ

يُعِيْدَنِيْ كَمَا بَدَأَنِيْ ، وَلَيْسَ أَوَّلُ الْخَلْقِ بِأَهْوَنَ عَلَيَّ مِنْ اِعَادَتِهٖ.
وَأَمَّا شَتْمُهُ اِيَّايَ ، فَقَوْلُهُ : اتَّخَذَ اللّٰهُ وَلَدًا ، وَاَنَا الْاَحَدُ الصَّمَدُ ،
لَمْ أَلِدْ وَلَمْ أُوْلَدْ ، وَلَمْ يَكُنْ لِيْ كُفُوًا اَحَدٌ "

رواه البخاری(وکذلك النسائی)

ಅಬೂ ಹುರೈರಾ(ರ) ಅವರಿಂದ ವರದಿ: ಪ್ರವಾದಿಯವರು(ಸ) ಹೇಳಿದರು:

ಅಲ್ಲಾಹನು ಹೇಳುತ್ತಾನೆ, "ಆದಮನ ಪುತ್ರನು (ಮಾನವನು) ನನ್ನನ್ನು ನಿರಾಕರಿಸಿದನು. ಇದು ಅವನಿಗೆ ಭೂಷಣವಾಗಿರಲಿಲ್ಲ, ಅವನು ನನ್ನನ್ನು ಬೈದನು. ಇದೂ ಅವನಿಗೆ ತಕ್ಕುದಾಗಿರಲಿಲ್ಲ, ಅವನು ನನ್ನನ್ನು ನಿರಾಕರಿಸು ವುದೆಂದರೆ ನಾನು ಅವನನ್ನು ಒಮ್ಮೆ ಸೃಷ್ಟಿಸಿದಂತೆ ಇನ್ನೊಮ್ಮೆ ಸೃಷ್ಟಿಸಲಾರೆನೆಂದು ಹೇಳುವುದಾಗಿದೆ. ವಸ್ತುತಃ ಪ್ರಥಮ ಬಾರಿ ಸೃಷ್ಟಿಸುವುದು ಎರಡನೇ ಬಾರಿ ಸೃಷ್ಟಿಸುವಷ್ಟು ಸುಲಭವಾಗಿರಲಿಲ್ಲ, ಅವನು ನನ್ನನ್ನು ಬೈಯುವುದೆಂದರೆ, ಅಲ್ಲಾಹನು ತನಗೆ ಪುತ್ರನನ್ನು ಮಾಡಿಕೊಂಡಿದ್ದಾನೆಂದು ಹೇಳುವುದಾಗಿದೆ. ವಸ್ತುತಃ ನಾನು ಏಕಮಾತ್ರನಾಗಿರುವೆನು. ಎಲ್ಲರಿಗೂ ಆಶ್ರಯ ನೀಡುವವನಾಗಿರುವೆನು. ನನಗೆ ತಂದೆಯೂ ಇಲ್ಲ, ಮಗನೂ ಇಲ್ಲ, ನನಗೆ ಸರಿಸಮಾನರಾಗಿರುವವರು ಯಾರೂ ಇಲ್ಲ." **(ಬುಖಾರಿ, ನಸಾಈ)**

3. ಬೆಳಿಗ್ಗೆ ಕೆಲವರು ವಿಶ್ವಾಸವಿರಿಸಿದರು; ಕೆಲವರು ಅವಿಶ್ವಾಸಿಗಳಾದರು

عَنْ زَيْدِ بْنِ خَالِدٍ الْجُهَنِيْ رَضِيَ اللّٰهُ عَنْهُ قَالَ : صَلّٰى لَنَا رَسُوْلُ اللّٰهِ ،
صَلَّى اللّٰهُ عَلَيْهِ وَسَلَّمَ ، صَلَاةَ الصُّبْحِ بِالْحُدَيْبِيَةِ ، عَلٰى اِثْرِ سَمَاءٍ
كَانَتْ مِنَ اللَّيْلَةِ. فَلَمَّا انْصَرَفَ النَّبِيُّ ﷺ ، أَقْبَلَ عَلَى النَّاسِ فَقَالَ
لَهُمْ " هَلْ تَدْرُوْنَ مَاذَا قَالَ رَبُّكُمْ ؟ قَالُوْا اللّٰهُ وَرَسُوْلُهُ أَعْلَمُ ، قَالَ :

أَصْبَحَ مِنْ عِبَادِىْ مُؤْمِنٌ بِىْ وَ كَافِرٌ ، فَأَمَّا مَنْ قَالَ: مُطِرْنَا بِفَضْلِ اللّٰهِ وَرَحْمَتِهِ فَذَلِكَ مُؤْمِنٌ بِىْ . كَافِرٌ بِالْكَوْكَبِ ، وَأَمَّا مَنْ قَالَ: مُطِرْنَا بِنَوْءِ كَذَا وَ كَذَا ، فَذَلِكَ كَافِرٌ بِىْ ، مُؤْمِنٌ بِالْكَوْكَبِ".

رواه البخارى (وكذلك مالك والنسائى)

ಝೈದ್ ಬಿನ್ ಖಾಲಿದ್ ಜುಹ್ನೀ(ರ) ಅವರಿಂದ ವರದಿ: ಅಲ್ಲಾಹನ ಸಂದೇಶವಾಹಕರು(ಸ) ನಮಗೆ ಹುದೈಬಿಯಾದಲ್ಲಿ ನಮಾಝ್ ಮಾಡಿಸಿದರು. ಅಂದು ರಾತ್ರಿ ಮಳೆಯಾಗಿತ್ತು. ನಮಾಝ್ ಮುಗಿದ ಬಳಿಕ ಪ್ರವಾದಿಯವರು(ಸ) ಜನರೆಡೆಗೆ ತಿರುಗಿ ಕುಳಿತುಕೊಂಡು ಕೇಳಿದರು,

"ನಿಮ್ಮ ಪ್ರಭು ಏನು ಹೇಳಿದನೆಂದು ಬಲ್ಲಿರಾ?" ಜನರು ಹೇಳಿದರು, "ಅಲ್ಲಾಹ್ ಮತ್ತು ಆತನ ಸಂದೇಶವಾಹಕರೇ ಚೆನ್ನಾಗಿ ಬಲ್ಲರು." ಆಗ ಪ್ರವಾದಿ(ಸ) ಹೇಳಿದರು, "ಇಂದು ಬೆಳಿಗ್ಗೆ ನನ್ನ (ಅಲ್ಲಾಹನ) ಕೆಲವು ದಾಸರು ನನ್ನ ಮೇಲೆ ವಿಶ್ವಾಸ ತಾಳಿದರು, ಇನ್ನು ಕೆಲವರು ನಿರಾಕರಿಸಿದರು. ನಮ್ಮ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಕರುಣೆ ಸುರಿಯಿತೆಂದು ಹೇಳಿದವನು ನನ್ನ ಮೇಲೆ ವಿಶ್ವಾಸವಿರಿಸುವವನಾಗಿದ್ದಾನೆ. ಇಂತಿಂತಹ ನಕ್ಷತ್ರಗಳ ಕಾರಣದಿಂದ ನಮ್ಮ ಮೇಲೆ ಮಳೆ ಸುರಿಯಿತೆಂದು ಹೇಳಿದವನು ನನ್ನನ್ನು ನಿರಾಕರಿಸಿದವನೂ ನಕ್ಷತ್ರಗಳನ್ನು ನಂಬುವವನೂ ಆಗಿದ್ದಾನೆ."

(ಬುಖಾರಿ, ಮಾಲಿಕ್, ನಸಾಈ)

4. ಕಾಲವನ್ನು ಹಳಿಯದಿರಿ

عَنْ أَبِىْ هُرَيْرَةَ رَضِىَ اللّٰهُ عَنْهُ قَالَ ، قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : " قَالَ اللّٰهُ يَسُبُّ بَنُوْا آدَمَ الدَّهْرُ ، وَأَنَا الدَّهْرُ ، بِيَدِىَ اللَّيْلُ وَالنَّهَارُ".

رواه البخارى (وكذلك مسلم)

ಅಬೂಹುರೈರಾರಿಂದ(ರ) ವರದಿಯಾಗಿದೆ: ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ಆದಮನ ಪುತ್ರನು (ಮಾನವ) ಕಾಲವನ್ನು ಹಳಿಯುತ್ತಾನೆ. ವಸ್ತುತಃ ನಾನೇ ಕಾಲವಾಗಿದ್ದೇನೆ. ನನ್ನ ಕೈಯಿಂದಲೇ ರಾತ್ರಿ-ಹಗಲುಗಳ ಉರುಳಾಟವಿದೆ." **(ಬುಖಾರಿ, ಮುಸ್ಲಿಮ್)**

5. ನನಗೂ ಶಿರ್ಕ್‌ಗೂ ಸಂಬಂಧವಿಲ್ಲ

عَنْ أَبِىْ هُرَيْرَةَ رَضِىَ اللّٰهُ عَنْهُ قَالَ قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : قَالَ اللّٰهُ تَبَارَكَ وَتَعَالٰى ، " اَنَا اَغْنٰى الشُّرَكَاءِ عَنِ الشِّرْكِ ، مَنْ عَمِلَ عَمَلاً اَشْرَكَ فِيْهِ غَيْرِىْ تَرَكْتُهُ وَشِرْكَهُ ."

رواه مسلم (وكذلك ابن ماجه)

ಅಬೂ ಹುರೈರಾ(ರ)ರಿಂದ ವರದಿ. ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು:

ಅಲ್ಲಾಹನು ಹೇಳುತ್ತಾನೆ, "ನಾನು ಸಕಲ ಶಿರ್ಕ್ ಮಾಡುವವರ ಶಿರ್ಕ್‌ನಿಂದ (ಬಹುದೇವತ್ವದಿಂದ) ನಿರಪೇಕ್ಷನಾಗಿದ್ದೇನೆ. ಯಾರಾದರೂ ನನ್ನೊಂದಿಗೆ ಇತರರನ್ನು ಸೇರಿಸಿಕೊಂಡಿರುವ ಕರ್ಮ ಮಾಡಿದರೆ, ನಾನು ಅವನಿಂದಲೂ ಅವನ ಶಿರ್ಕ್‌ನಿಂದಲೂ ಮುಕ್ತನಾಗಿದ್ದೇನೆ." **(ಮುಸ್ಲಿಮ್, ಇಬ್ನುಮಾಜಃ)**

6. ಯೋಧ, ವಿದ್ವಾಂಸ ಮತ್ತು ದಾನಿಯ ದುರ್ಗತಿ

عَنْ أَبِىْ هُرَيْرَةَ رَضِىَ اللّٰهُ عَنْهُ قَالَ : سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ : " اِنَّ أَوَّلَ النَّاسِ يُقْضٰى يَوْمَ الْقِيَامَةِ عَلَيْهِ رَجُلٌ اسْتُشْهِدَ

فَأُتِيَ بِهِ فَعَرَّفَهُ نِعَمَهُ فَعَرَفَهَا. قَالَ: فَمَا عَمِلْتَ فِيهَا ؟ قَالَ قَاتَلْتُ فِيكَ حَتَّى اُسْتُشْهِدْتُ، قَالَ كَذَبْتَ، وَلٰكِنَّكَ قَاتَلْتَ لِاَنْ يُقَالَ : جَرِئٌ، فَقَدْ قِيلَ . ثُمَّ اُمِرَ بِهِ فَسُحِبَ عَلَى وَجْهِهِ حَتَّى اُلْقِيَ فِي النَّارِ. وَرَجُلٌ تَعَلَّمَ الْعِلْمَ وَعَلَّمَهُ وَقَرَأَ الْقُرْآنَ، فَأُتِيَ بِهِ، فَعَرَّفَهُ نِعَمَهُ فَعَرَفَهَا. قَالَ : فَمَا عَمِلْتَ فِيهَا ؟ قَالَ : تَعَلَّمْتُ الْعِلْمَ وَعَلَّمْتُه، وَقَرَأْتُ فِيكَ الْقُرْآنَ. قَالَ : كَذَبْتَ ، وَلٰكِنَّكَ تَعَلَّمْتَ الْعِلْمَ لِيُقَالَ عَالِمٌ ، وَقَرَأْتَ الْقُرْآنَ ، لِيُقَالَ: هُوَ قَارِئٌ، فَقَدْ قِيلَ ، ثُمَّ أُمِرَ بِهِ ، فَسُحِبَ عَلَى وَجْهِهِ ، حَتَّى أُلْقِيَ فِي النَّارِ. وَرَجُلٌ وَسَّعَ اللّٰهُ عَلَيْهِ، وَأَعْطَاهُ مِنْ اَصْنَافِ الْمَالِ كُلِّهِ، فَأُتِيَ بِهِ ، فَعَرَّفَهُ نِعَمَهُ فَعَرَفَهَا . قَالَ : فَمَا عَمِلْتَ فِيهَا ؟ قَالَ : مَا تَرَكْتُ مِنْ سَبِيلٍ تُحِبُّ اَنْ يُنْفَقَ فِيهَا اِلَّا أُنْفَقْتُ فِيهَا لَكَ ، قَالَ كَذَبْتَ ، وَلٰكِنَّكَ فَعَلْتَ لِيُقَالَ : هُوَ جَوَادٌ، فَقَدْ قِيلَ ثُمَّ أُمِرَ بِهِ، فَسُحِبَ عَلَى وَجْهِهِ ، ثُمَّ اُلْقِيَ فِي النَّارِ.“

رواه مسلم (وكذلك الترمذى والنسائى)

ಅಬೂಹುರೈರಾರಿಂದ ವರದಿ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ:

ಪುನರುತ್ಥಾನ ದಿವಸ ಮೊತ್ತಮೊದಲು ಅಲ್ಲಾಹನ ಮಾರ್ಗದಲ್ಲಿ ಹುತಾತ್ಮನಾದವನ ಕುರಿತು ತೀರ್ಮಾನ ಮಾಡಲಾಗುವುದು. ಅವನನ್ನು ಹಾಜರುಪಡಿಸಿದಾಗ ಅಲ್ಲಾಹನು ಅವನಿಗೆ ನೀಡಿದ ಅನುಗ್ರಹಗಳನ್ನು ನೆನಪಿಸುವನು. ಅವುಗಳನ್ನೆಲ್ಲ ಅವನು ಒಪ್ಪಿ

ಕೊಳ್ಳುವನು. "ಅವುಗಳನ್ನೆಲ್ಲ ಹೇಗೆ ಬಳಸಿದೆ?" ಎಂದು ಅಲ್ಲಾಹ್ ವಿಚಾರಿಸುವನು. ಅವನು ಹೇಳುವನು, "ನಾನು ನಿನ್ನ ಮಾರ್ಗದಲ್ಲಿ ಹೋರಾಡುತ್ತಾ ಹುತಾತ್ಮನಾದೆ." ಅಲ್ಲಾಹ್ ಹೇಳುವನು, "ನೀನು ಸುಳ್ಳು ಹೇಳುತ್ತಿರುವೆ. ಜನರು ನಿನ್ನನ್ನು ದೊಡ್ಡ ಪರಾಕ್ರಮಿಯೆಂದು ಹೇಳಲೆಂದು ನೀನು ಹೋರಾಡಿದೆ. ನಿನ್ನನ್ನು ಹಾಗೆ ಹೇಳಲಾಯಿತು."

ಅನಂತರ ಅವನ ಬಗ್ಗೆ ತೀರ್ಪು ನೀಡಲಾಗುವುದು. ಅವನ ಮೂತಿ ಹಿಡಿದೆಳೆಯುತ್ತಾ ಅವನನ್ನು ನರಕಾಗ್ನಿಗೆ ಎಸೆಯಲಾಗುವುದು.

ಅನಂತರ ಇನ್ನೊಬ್ಬ ವ್ಯಕ್ತಿಯನ್ನು ಹಾಜರುಪಡಿಸಲಾಗುವುದು. ಅವನು ವಿದ್ಯಾಭ್ಯಾಸ ಮಾಡಿ ಇತರರಿಗೂ ಕಲಿಸಿದ ಹಾಗೂ ಕುರ್‌ಆನ್ ಪಠಿಸಿದ ವ್ಯಕ್ತಿಯಾಗಿರುವನು. ಅವನಿಗೂ ಅಲ್ಲಾಹ್ ತನ್ನ ಅನುಗ್ರಹಗಳನ್ನು ನೆನಪಿಸುವನು. ಅವನು ಅವೆಲ್ಲವನ್ನೂ ಒಪ್ಪಿಕೊಳ್ಳುವನು. "ಅವುಗಳನ್ನೆಲ್ಲ ಹೇಗೆ ವ್ಯಯಿಸಿದೆ?" ಎಂದು ಅಲ್ಲಾಹ್ ಕೇಳುವನು. ಅವನು ಹೇಳುವನು, "ನಾನು ವಿದ್ಯಾಭ್ಯಾಸ ಮಾಡಿ ಇತರರಿಗೂ ಅದನ್ನು ಕಲಿಸಿದೆ. ನಿನಗಾಗಿ ಕುರ್‌ಆನ್ ಪಠಿಸಿದೆ." ಅಲ್ಲಾಹ್ ಹೇಳುವನು, "ನೀನು ಸುಳ್ಳು ಹೇಳುತ್ತಿರುವೆ. ನೀನು ಜನರಿಂದ ದೊಡ್ಡ ವಿದ್ವಾಂಸನೆಂದು ಕರೆಸಿಕೊಳ್ಳಲಿಕ್ಕಾಗಿ ಜ್ಞಾನ ಸಂಪಾದಿಸಿದೆ. ದೊಡ್ಡ ಕಾರೀ ಎಂದು ಕರೆಸಿಕೊಳ್ಳಲಿಕ್ಕಾಗಿ ಕುರ್‌ಆನ್ ಪಠಿಸಿದೆ. ಜನರು ನಿನ್ನನ್ನು ಹಾಗೆಲ್ಲ ಹೇಳಿಕೊಂಡರು."

ತರುವಾಯ ಅವನ ಬಗ್ಗೆ ತೀರ್ಪು ನೀಡಲಾಗುವುದು. ಅವನ ಮೂತಿ ಹಿಡಿದೆಳೆದು ಅವನನ್ನು ನರಕಾಗ್ನಿಗೆ ಹಾಕಲಾಗುವುದು.

ತರುವಾಯ ಮೂರನೆಯ ವ್ಯಕ್ತಿಯನ್ನು ಹಾಜರು ಪಡಿಸಲಾಗುವುದು. ಅವನನ್ನು ಅಲ್ಲಾಹನು ಬಹಳ ಸಂಪನ್ನನಾಗಿ ಮಾಡಿದ್ದನು. ಅವನಿಗೆ ಎಲ್ಲ ರೀತಿಯ ಸಂಪತ್ತು ನೀಡಿ ಅನುಗ್ರಹಿಸಿದ್ದನು. ಅಲ್ಲಾಹನು ಅವನಿಗೆ ತನ್ನ ಅನುಗ್ರಹಗಳನ್ನೆಲ್ಲ ನೆನಪಿಸುವನು. ಅವನು ಅವುಗಳನ್ನೆಲ್ಲ ಒಪ್ಪಿಕೊಳ್ಳುವನು. ಅಲ್ಲಾಹ್ ಕೇಳುವನು, "ನೀನು ಆ ಅನುಗ್ರಹಗಳನ್ನು ಏನು ಮಾಡಿದೆ?" ಅವನು ಹೇಳುವನು, "ನೀನು ಇಷ್ಟಪಡುವ ಮಾರ್ಗದಲ್ಲಿ ಖರ್ಚು ಮಾಡಬೇಕಾದ ಯಾವ ಅವಕಾಶವನ್ನೂ ನಾನು ಕೈಬಿಡಲಿಲ್ಲ. ಅದೆಲ್ಲವನ್ನೂ ನಿನ್ನ ಸಂಪ್ರೀತಿಗಾಗಿ ಮಾಡಿದೆ." ಅಲ್ಲಾಹ್ ಹೇಳುವನು, "ನೀನು ಸುಳ್ಳು ಹೇಳುತ್ತಿರುವೆ. ನೀನು ದೊಡ್ಡ ದಾನಶೂರ ಮತ್ತು ಕೊಡುಗೈ ದಾನಿಯೆಂದು ಜನರು ಹೇಳಲೆಂದು ಹಾಗೆ ಮಾಡಿದೆ. ನಿನ್ನನ್ನು ಹಾಗೆಯೇ ಕರೆಯಲಾಯಿತು."

ಅವನ ಬಗ್ಗೆ ತೀರ್ಪು ನೀಡಲಾಗುವುದು ಮತ್ತು ಅವನನ್ನು ಮೂತಿ ಹಿಡಿದೆಳೆಯುತ್ತಾ ನರಕಕ್ಕೆ ಎಸೆಯಲಾಗುವುದು. **(ಮುಸ್ಲಿಮ್, ತಿರ್ಮಿದಿ, ನಸಾಈ)**

7. ನನ್ನ 'ನಮಾಝ್' ದಾಸನನ್ನು ಕ್ಷಮಿಸಿದೆ

عَنْ عُقْبَةَ بْنِ عَامِرٍ رَضِيَ اللّٰهُ عَنْهُ قَالَ : سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ ، يَقُوْلُ : "يَعْجَبُ رَبُّكَ مِنْ رَاعِيْ غَنَمٍ ، فِيْ رَأْسِ شَظِيَّةِ الْجَبَلِ يُؤَذِّنُ بِالصَّلَاةِ وَيُصَلِّيْ . فَيَقُوْلُ اللّٰهُ عَزَّوَجَلَّ : أُنْظُرُوْا اِلٰى عَبْدِيْ هَذَا ، يُؤَذِّنُ وَيُقِيْمُ الصَّلَاةَ ، يَخَافُ مِنِّيْ . قَدْ غَفَرْتُ لِعَبْدِيْ ، وَأَدْخَلْتُهُ الْجَنَّةَ ." رواه النسائی بسند صحيح

ಉಕ್ಬಾ ಬಿನ್ ಆಮಿರ್(ರ)ರಿಂದ ವರದಿ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ:

ನಿನ್ನ ಪ್ರಭು ಪರ್ವತದ ತಪ್ಪಲಲ್ಲಿ (ಸಮಯವಾದೊಡನೆ) ಅದಾನ್ ಕೊಟ್ಟು, ನಮಾಝ್ ಮಾಡುವ ಕುರಿಗಾಹಿಯ ಬಗ್ಗೆ ಬಹಳ ಸಂತೋಷ ಪಡುತ್ತಾನೆ. ಅಲ್ಲಾಹ್ ಹೇಳುತ್ತಾನೆ, "ಅದಾನ್ ಕೊಟ್ಟು ನಮಾಝ್ ಮಾಡುವ ಆ ನನ್ನ ದಾಸನನ್ನು ನೋಡಿರಿ. ಅವನಿಗೆ ನನ್ನ ಭಯವಿದೆ. ನಾನು ನನ್ನ ದಾಸನನ್ನು ಕ್ಷಮಿಸಿದೆ ಮತ್ತು ಅವನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸಿದೆ." **(ನಸಾಈ)**

8. 'ಫಾತಿಹಾ'ದ ಪ್ರತಿ ಸೂಕ್ತಕ್ಕೂ ಅಲ್ಲಾಹನ ಉತ್ತರ

عَنْ أَبِيْ هُرَيْرَةَ رَضِيَ اللّٰهُ عَنْهُ ، عَنِ النَّبِيِّ صَلَّى اللّٰهُ عَلَيْهِ وَسَلَّمَ ، قَالَ : "مَنْ صَلَّى صَلَاةً لَمْ يَقْرَأْ فِيْهَا بِأُمِّ الْقُرْآنِ ، فَهِيَ خِدَاجٌ ثَلَاثًا ، غَيْرَ تَمَامٍ فَقِيْلَ لِأَبِيْ هُرَيْرَةَ : اِنَّا نَكُوْنُ وَرَاءَ الإِمَامِ فَقَالَ : اِقْرَأْ بِهَا فِيْ

نَفْسِكَ ، فَإِنِّى سَمِعْتُ النَّبِيَّ صَلَّى اللّٰهُ عَلَيْهِ وَسَلَّمَ ، يَقُوْلُ : " قَالَ اللّٰهُ عَزَّوَجَلَّ : قَسَمْتُ الصَّلَاةَ بَيْنِىْ وَبَيْنَ عَبْدِىْ نِصْفَيْنِ ، وَلِعَبْدِىْ مَاسَأَلَ . فَإِذَا قَالَ الْعَبْدُ (اَلْحَمْدُ لِلّٰهِ رَبِّ الْعَالَمِيْنَ) قَالَ اللّٰهُ عَزَّوَجَلَّ: حَمِدَنِىْ عَبْدِىْ ، وَإِذَا قَالَ (الرَّحْمٰنِ الرَّحِيْمِ) قَالَ اللّٰهُ عَزَّوَجَلَّ: أَثْنٰى عَلَىَّ عَبْدِىْ ، وَإِذَا قَالَ: (مَالِكِ يَوْمِ الدِّيْنِ) قَالَ اللهُ مَجَّدَنِىْ عَبْدِىْ - وَقَالَ مَرَّةً : فَوَّضَ إِلَيَّ عَبْدِىْ - فَإِذَا قَالَ : (إِيَّاكَ نَعْبُدُ وَإِيَّاكَ نَسْتَعِيْنَ) قَالَ ، هٰذَا بَيْنِىْ بَيْنَ عَبْدِىْ ، وَلِعَبْدِىْ مَا سَأَلَ : فَإِذَا قَالَ : (اِهْدِنَا الصِّرَاطَ الْمُسْتَقِيْمَ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِيْنَ) قَالَ : هٰذَا لِعَبْدِىْ وَلِعَبْدِىْ مَا سَأَلَ . " رواه مسلم

(وكذلك مالك والترمذى وأبوداؤد والنسائى وابن ماجه)

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

“ಯಾರು ನಮಾಝ್‌ನಲ್ಲಿ ‘ಉಮ್ಮುಲ್ ಕುರ್‌ಆನ್’ (ಸೂರಃ ಫಾತಿಹಾ) ಪಠಿಸುವುದಿಲ್ಲವೋ ಅವನ ನಮಾಝ್ ಅಪೂರ್ಣವಾಗಿದೆ.” (ಪ್ರವಾದಿಯವರು ಇದನ್ನು ಮೂರು ಬಾರಿ ಆವರ್ತಿಸಿದರು.) ಆಬೂಹುರೈರಾರೊಡನೆ ಯಾರೋ ಕೇಳಿದರು, “ನಾವಂತೂ ಇಮಾಮರ ಹಿಂದೆ ನಮಾಝ್ ಮಾಡುತ್ತೇವಲ್ಲ!” ಅವರು ಹೇಳಿದರು: “ಅದನ್ನು ಮನಸ್ಸಿನಲ್ಲಿ ಪಠಿಸಿರಿ. ಏಕೆಂದರೆ ಪ್ರವಾದಿಯವರು(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ–

ಅಲ್ಲಾಹ್ ಹೇಳುತ್ತಾನೆ, “ನಾನು ನಮಾಝನ್ನು ನನ್ನ ಮತ್ತು ನನ್ನ ದಾಸನ ಮಧ್ಯೆ ಸಮನಾಗಿ ಹಂಚಿದ್ದೇನೆ. ನನ್ನ ದಾಸನು ಏನು ಬೇಡುತ್ತಾನೋ ಅದು ಅವನಿಗೆ ಸಿಗುವುದು.” ದಾಸನು ‘ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್’ (ಸರ್ವಸ್ತುತಿಯೂ

ಸರ್ವಲೋಕಗಳ ಪ್ರಭುವಿಗೆ ಮೀಸಲು) ಎಂದು ಹೇಳಿದಾಗ ಮಹಾನನಾದ ಅಲ್ಲಾಹ್ ಹೇಳುತ್ತಾನೆ, "ನನ್ನ ದಾಸನು ನನಗೆ ಕೃತಜ್ಞತೆ ಸಲ್ಲಿಸಿದನು." ಅವನು 'ಅರ್ರಹ್ಮಾನಿರ್ರಹೀಮ್' (ಪರಮ ದಯಾಮಯ ಮತ್ತು ಕರುಣಾನಿಧಿ)' ಎಂದಾಗ ಅಲ್ಲಾಹ್ ಹೇಳುತ್ತಾನೆ, "ನನ್ನ ದಾಸನು ನನ್ನನ್ನು ಪ್ರಶಂಸಿಸಿದನು." ಅವನು 'ಮಾಲಿಕಿಯೌಮಿದ್ದೀನ್' (ನಿರ್ಣಾಯಕ ದಿನದ ಅಧಿಪತಿ) ಎಂದಾಗ ಅಲ್ಲಾಹ್ ಹೇಳುತ್ತಾನೆ, "ನನ್ನ ದಾಸನು ನನ್ನನ್ನು ಪ್ರಕೀರ್ತಿಸಿದನು." ಅವನು 'ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್' (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ) ಎಂದು ಪಠಿಸಿದಾಗ, ಅಲ್ಲಾಹ್ ಹೇಳುತ್ತಾನೆ, "ಇದು ನನ್ನ ಮತ್ತು ದಾಸನ ಮಧ್ಯೆ ಒಪ್ಪಂದವಾಗಿದೆ. ದಾಸನು ಬೇಡಿದ್ದೆಲ್ಲವೂ ಅವನಿಗೆ ಸಿಗುವುದು." ಅವನು 'ಇಹ್‌ದಿನಸ್ಸಿರಾತಲ್ ಮುಸ್ತಕೀಮ್, ಸಿರಾತಲ್ಲದೀನ ಅನ್‌ಅಮ್ತ ಅಲೈಹಿಮ್, ಗೈರಿಲ್ ಮಗ್‌ದೂಬಿ ಅಲೈಹಿಮ್, ವಲದ್ದಾಲ್ಲೀನ್' (ನಿನ್ನ ಅನುಗ್ರಹಗಳಿಗೆ ಪಾತ್ರರಾದವರ ಮಾರ್ಗ. ನಿನ್ನ ಕ್ರೋಧಕ್ಕೆ ಪಾತ್ರರಾದವರ ಮತ್ತು ಸನ್ಮಾರ್ಗದಿಂದ ವ್ಯತಿಚಲಿಸಿದವರ ಮಾರ್ಗ ಅಲ್ಲ) ಎಂದು ಹೇಳಿದಾಗ ಅಲ್ಲಾಹ್ ಹೇಳುತ್ತಾನೆ, "ಇದು ನನ್ನ ದಾಸನಿಗಾಗಿದೆ. ಅವನು ಬೇಡುವುದೆಲ್ಲವೂ ಅವನಿಗೆ ಸಿಗುವುದು."

(ಮುಸ್ಲಿಮ್, ಮಾಲಿಕ್, ತಿರ್ಮಿದಿ, ಇಬ್ನುಮಾಜ, ಅಬೂದಾವೂದ್, ನಸಾಈ)

9. ಪ್ರಥಮ ವಿಚಾರಣೆ ನಮಾಝ್‌ನದ್ದಾಗಿರುವುದು

عَنْ أَبِيْ هُرَيْرَةَ رَضِيَ اللّٰهُ عَنْهُ قَالَ : قَالَ رَسُوْلُ اللّٰهِ ﷺ : "اِنَّ أَوَّلَ مَا يُحَاسَبُ بِهِ الْعَبْدُ يَوْمَ الْقِيَامَةِ مِنْ عَمَلِهِ صَلَاتُهُ. فَاِنْ صَلَحَتْ فَقَدْ أَفْلَحَ وَأَنْجَحَ ، وَاِنْ فَسَدَتْ فَقَدْ خَابَ وَخَسِرَ. فَاِنِ انْتَقَصَ مِنْ فَرِيْضَتِهِ شَيْءٌ ، قَالَ الرَّبُّ عَزَّوَجَلَّ: انْظُرُوْا هَلْ لِعَبْدِيْ مِنْ تَطَوُّعٍ فَيُكَمَّلُ بِهَا مَا انْتُقِصَ مِنَ الْفَرِيْضَةِ- ثُمَّ يَكُوْنُ سَائِرُ عَمَلِهِ عَلَى ذَالِكَ-"

رواه الترمذی (و كذلك أبو داؤد والنسائی وابن ماجه وأحمد)

ಅಬೂ ಹುರೈರಾರಿಂದ ವರದಿ. ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು:

"ನಿರ್ಣಾಯಕ ದಿನದಂದು ದಾಸನ ಕರ್ಮಗಳ ಪೈಕಿ ಪ್ರಥಮವಾಗಿ ನಮಾಝ್‌ನ ಕುರಿತು ವಿಚಾರಣೆ ನಡೆಯುವುದು. ಅದು ಸರಿಯಾಗಿದ್ದರೆ, ಅವನು ಯಶಸ್ವಿಯಾಗುವನು, ಪಾರಾಗುವನು. ಆದರೆ ನಮಾಝ್‌ನಲ್ಲಿ ದೋಷವುಂಟಾಗಿದ್ದರೆ, ಅವನು ಪರಾಜಯ ಹೊಂದುವನು. ನಷ್ಟಕ್ಕೊಳಗಾಗುವನು. ಇನ್ನು ಅವನ ಫರ್ಝ್ (ಕಡ್ಡಾಯ) ನಮಾಝ್‌ನಲ್ಲಿ ದೋಷವುಂಟಾಗಿದ್ದರೆ, ಅಲ್ಲಾಹ್ ಹೇಳುವನು, 'ನನ್ನ ದಾಸನ ಕರ್ಮಗಳಲ್ಲಿ ನಫಿಲ್ ನಮಾಝ್‌ಗಳೇನಾದರೂ ಇವೆಯೇ ಎಂದು ನೋಡಿರಿ. ಆ ನಮಾಝ್‌ಗಳಿಂದ ಫರ್ಝ್‌ಗಳ ಕೊರತೆಯನ್ನು ತುಂಬಿರಿ.' ಅನಂತರ ಅವನ ಇತರ ಕರ್ಮಗಳ ವಿಚಾರಣೆಯೂ ಅದೇ ರೀತಿಯಲ್ಲಿ ನಡೆಯುವುದು."

(ತಿರ್ಮಿದಿ, ಅಬೂದಾವೂದ್, ನಸಾಈ, ಇಬ್ನು ಮಾಜ, ಅಹ್ಮದ್)

10. ಉಪವಾಸಿಗನಿಗೆ ಎರಡು ಸಂತೋಷ

عَنْ أَبِى هُرَيْرَةَ رَضِىَ اللّٰهُ عَنْهُ عَنِ النَّبِىِّ صَلَّى اللّٰهُ عَلَيْهِ وَسَلَّمَ ، قَالَ : "يَقُوْلُ اللّٰهُ عَزَّوَجَلَّ : الصَّوْمُ لِى ، وَأَنَا أَجْزِى بِهِ ، يَدَعُ شَهْوَتَهُ وَأَكْلَهُ وَشُرْبَهُ مِنْ أَجْلِى ، وَالصَّوْمُ جُنَّةٌ ، وَلِلصَّائِمِ فَرْحَتَانِ : فَرْحَةٌ حِيْنَ يُفْطِرُ ، وَفَرْحَةٌ حِيْنَ يَلْقَى رَبَّهُ وَلَخُلُوْفُ فَمِ الصَّائِمِ أَطْيَبُ عِنْدَ اللّٰهِ مِنْ رِيْحِ الْمِسْكِ "۔

رواه البخارى

(وكذلك مسلم ومالك والترمذى والنسائى وابن ماجه)

ಅಬೂ ಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ಉಪವಾಸವು ನನಗಾಗಿದೆ. ಅದರ ಪ್ರತಿಫಲವನ್ನು ನಾನು ನೀಡುವೆನು. ದಾಸನು ತನ್ನ ವಿಷಯಾಸಕ್ತಿಯನ್ನು ಮತ್ತು ಆಹಾರ-ಪಾನೀಯಗಳನ್ನು ನನಗಾಗಿ ತೊರೆಯುತ್ತಾನೆ." ಉಪವಾಸವು

ಗುರಾಣಿಯಾಗಿದೆ. ಉಪವಾಸಿಗನ ಪಾಲಿಗೆ ಎರಡು ಸಂತೋಷಗಳಿವೆ. ಒಂದು, ಅವನು ಇಫ್ತಾರ್ ಮಾಡುವಾಗ ಸಿಗುವ ಸಂತೋಷ. ಇನ್ನೊಂದು, ಅವನು ಅವನು ತನ್ನ ಪ್ರಭುವನ್ನು ಭೇಟಿಯಾಗುವ ಸಮಯದಲ್ಲಿ ಆಗುವ ಸಂತೋಷ. ಉಪವಾಸಿಗನ ಬಾಯಿಯಿಂದ ಹೊರಡುವ ವಾಸನೆಯು ಅಲ್ಲಾಹನ ದೃಷ್ಟಿಯಲ್ಲಿ ಕಸ್ತೂರಿಯನ್ನೂ ಮೀರಿಸುವಷ್ಟು ಪ್ರಿಯವಾಗಿದೆ.

(ಬುಖಾರಿ, ಮುಸ್ಲಿಮ್, ಮಾಲಿಕ್, ತಿರ್ಮಿದಿ, ನಸಾಈ, ಇಬ್ನುಮಾಜ)

11. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಅಲ್ಲಾಹನು ನಿನಗೆ ನೀಡುವನು

عَنْ أَبِىْ هُرَيْرَةَ رَضِىَ اللّٰهُ عَنْهُ، أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ، قَالَ : قَالَ اللّٰهُ : "أَنْفِقْ يَا ابْنَ آدَمَ، أُنْفِقْ عَلَيْكَ۔"

رواه البخارى (وكذلك مسلم)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಹೇಳುತ್ತಾನೆ, "ಓ ಆದಮನ ಪುತ್ರನೇ (ಮಾನವನೇ) ನೀನು (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡು. ನಾನು ನಿನ್ನ ಮೇಲೆ ಖರ್ಚು ಮಾಡುವೆನು." **(ಬುಖಾರಿ, ಮುಸ್ಲಿಮ್)**

12. ಔದಾರ್ಯ ತೋರುವವನಿಗೆ ಸುವಾರ್ತೆ

عَنْ أَبِىْ مَسْعُوْدٍ الْأَنْصَارِىْ رَضِىَ اللّٰهُ عَنْهُ، قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : "حُوْسِبَ رَجُلٌ مِمَّنْ كَانَ قَبْلَكُمْ، فَلَمْ يُوْجَدْ لَهُ مِنَ الْخَيْرِ شَيْءٌ، اِلَّا اِنَّهُ كَانَ يُخَالِطُ النَّاسَ، وَكَانَ مُوْسِرًا فَكَانَ

يَامُرُ غِلْمَانَهُ اَنْ يَتَجَاوَزُوْا عَنِ الْمُعْسِرِ۔ قَالَ قَالَ اللّٰهُ : نَحْنُ أَحَقُّ بِذٰلِكَ مِنْكَ۔ تَجَاوَزُوْ عَنْهُ۔"

رواه مسلم (و كذلك البخارى والنسائى)

ಅಬೂ ಮಸ್‌ಊದ್ ಅನ್ಸಾರಿ(ರ) ಅವರಿಂದ ವರದಿ. ಪ್ರವಾದಿ(ಸ) ಹೇಳಿದರು:

"ನಿಮಗಿಂತ ಮುಂಚೆ ಓರ್ವ ವ್ಯಕ್ತಿ ಗತಿಸಿ ಹೋಗಿದ್ದಾರೆ. ಅವರ ಲೆಕ್ಕ ಪರಿಶೋಧಿಸಲಾಯಿತು. ಅವರ ಬಳಿ ಯಾವುದೇ ಒಳಿತು ಇರಲಿಲ್ಲ, ಆದರೆ ಅವರು ಜನರೊಂದಿಗೆ ವ್ಯವಹಾರ ನಡೆಸುತ್ತಿದ್ದರು. ಬಹಳ ಸಂಪನ್ನ ವ್ಯಕ್ತಿಯಾಗಿದ್ದರು. ಅವರು ತನ್ನ ಗುಲಾಮರು, ಬಡವರು ಮತ್ತು ಸಂಕಷ್ಟ ಪೀಡಿತರೊಂದಿಗೆ ಔದಾರ್ಯ ತೋರುವಂತೆ ಉಪದೇಶಿಸುತ್ತಿದ್ದರು." ಪ್ರವಾದಿ(ಸ) ಹೇಳಿದರು, "ಅಲ್ಲಾಹ್ ಹೇಳುತ್ತಾನೆ, 'ನಾವು ನಿಮಗಿಂತ ಹೆಚ್ಚು ಔದಾರ್ಯ ತೋರುವವರಾಗಿದ್ದೇವೆ' ಮತ್ತು ಆ ವ್ಯಕ್ತಿಯೊಡನೆ ಔದಾರ್ಯ ತೋರುವಂತೆ ದೇವಚರರಿಗೆ ಆಜ್ಞಾಪಿಸಿದನು."

(ಬುಖಾರಿ, ಮುಸ್ಲಿಮ್, ನಸಾಈ)

13. ಖರ್ಜೂರದ ತುಂಡನ್ನು ದಾನ ಮಾಡಿಯಾದರೂ ನರಕಾಗ್ನಿಯಿಂದ ಪಾರಾಗಿರಿ

عَنْ عَدِيِّ بْنِ حَاتِمٍ رَضِيَ اللّٰهُ عَنْهُ يَقُوْلُ : " كُنْتُ عِنْدَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ، فَجَاءَهُ رَجُلَانِ : أَحَدُ هُمَا يَشْكُوْا الْعَيْلَةَ، وَالْاٰخَرُ يَشْكُوْا قَطْعَ السَّبِيْلِ فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ: أَمَّا قَطْعُ السَّبِيْلِ فَاِنَّهُ لَا يَأْتِىْ عَلَيْكَ اِلَّا قَلِيْلٌ، حَتّٰى تَخْرُجَ الْعِيْرُ اِلٰى مَكَّةَ بِغَيْرِ خَفِيْرٍ ۔ وَأَمَّا الْعَيْلَةُ، فَاِنَّ السَّاعَةَ لَا تَقُوْمُ حَتّٰى يَطُوْفُ

أَحَدُكُمْ بِصَدَقَتِهِ ، لَا يَجِدُ مَنْ يَقْبَلُهَا مِنْهُ . ثُمَّ لَيَقِفَنَّ أَحَدُكُمْ بَيْنَ يَدَيِ اللّٰهِ ، لَيْسَ بَيْنَهُ وَبَيْنَهُ حِجَابٌ وَلَا تَرْجُمَانٌ يُتَرْجِمُ لَهُ ، ثُمَّ لَيَقُوْلَنَّ لَهُ : أَلَمْ أُوْتِكَ مَالًا ؟ فَلَيَقُوْلَنَّ : بَلٰى ، ثُمَّ لَيَقُوْلَنَّ : أَلَمْ أُرْسِلْ اِلَيْكَ رَسُوْلًا ؟ فَلَيَقُوْلَنَّ : بَلٰى ، فَيَنْظُرُ عَنْ يَمِيْنِهِ ، فَلَا يَرٰى اِلَّا النَّارَ ، ثُمَّ يَنْظُرُ اِلٰى شِمَالِهِ ، فَلَا يَرٰى اِلَّا النَّارَ. فَلْيَتَّقِيَنَّ أَحَدُكُمُ النَّارَ ، وَلَوْ بِشَقِّ تَمْرَةٍ فَاِنْ لَمْ تَجِدْ فَبِكَلِمَةٍ طَيِّبَةٍ-" (رواه البخارى)

ಅದಿಯ್ಯ್ ಬಿನ್ ಹಾತಿಮ್‌ರಿಂದ ವರದಿ:

ನಾನು ಪ್ರವಾದಿಯವರ(ಸ) ಬಳಿಯಲ್ಲಿದ್ದೆ. ಅಲ್ಲಿಗೆ ಇಬ್ಬರು ವ್ಯಕ್ತಿಗಳು ಬಂದರು. ಅವರಲ್ಲೊಬ್ಬ ಹಸಿವು-ಬಡತನದ ಕುರಿತು ತನ್ನ ಅಳಲನ್ನು ತೋಡಿಕೊಳ್ಳುತ್ತಿದ್ದ, ಇನ್ನೊಬ್ಬ ಹೆದ್ದಾರಿಯ ದರೋಡೆ ಪ್ರಕರಣಗಳ ಕುರಿತು ದೂರಿಕೊಳ್ಳುತ್ತಿದ್ದ, ಪ್ರವಾದಿ(ಸ) ಹೇಳಿದರು, "ಹೆದ್ದಾರಿಯ ದರೋಡೆಗಳ ಕುರಿತು ಹೇಳುವುದಾದರೆ ಅದು ಇನ್ನು ಕೆಲವೇ ದಿನಗಳ ಮಟ್ಟಿಗಿರುವುದು. ಒಂದು ದಿನ ಬರಲಿದೆ. ಅಂದು ವ್ಯಾಪಾರಿ ತಂಡಗಳು ಯಾವುದೇ ಭಯವಿಲ್ಲದೆ ಮಕ್ಕಾದ ವರೆಗೆ ಪ್ರಯಾಣಿಸಲಿರುವುದು. ಹಸಿವು-ಬಡತನದ ಕುರಿತು ಹೇಳುವುದಾದರೆ ನಿಮ್ಮಲ್ಲೊಬ್ಬನು ತನ್ನ ದಾನವನ್ನು (ಝಕಾತನ್ನು) ಹಿಡಿದುಕೊಂಡು ಹೊರಡುವನು. ಆದರೆ ಅವನ ದಾನವನ್ನು ಸ್ವೀಕರಿಸಲು ಯಾರೂ ಇರಲಾರರು. ಪುನರುತ್ಥಾನ ದಿವಸ ನಿಮ್ಮಲ್ಲೊಬ್ಬನು ಖಂಡಿತ ಅಲ್ಲಾಹನ ಮುಂದೆ ನಿಂತಿರುವನು. ಅವನ ಮತ್ತು ಅಲ್ಲಾಹನ ಮಧ್ಯೆ ಯಾವುದೇ ತೆರೆ ಇರಲಾರದು. ಅವನನ್ನು ಪ್ರತಿನಿಧಿಸುವವನೂ ಯಾರೂ ಇರಲಾರನು. ತರುವವಾಯ ಅಲ್ಲಾಹನು ಅವನೊಡನೆ ಕೇಳುವನು, 'ನಾನು ನಿನಗೆ ಅಪಾರ ಸಂಪತ್ತನ್ನು ನೀಡಿರಲಿಲ್ಲವೇ?' ಅವನು ಹೌದೆನ್ನುವನು. ಅಲ್ಲಾಹ್ ಕೇಳುವನು, 'ನಾನು ನಿನ್ನ ಬಳಿಗೆ ನನ್ನ ಸಂದೇಶ ವಾಹಕನ್ನು ಕಳುಹಿಸಿರಲಿಲ್ಲವೇ?' ಅವನು ಹೌದೆನ್ನುವನು. ಅವನು ಬಲಭಾಗಕ್ಕೆ ತಿರುಗಿ ನೋಡಿದಾಗ ಅಗ್ನಿಯ ಹೊರತು ಇನ್ನೇನೂ ಕಾಣಲಾರದು. ಅನಂತರ ಎಡ ಭಾಗಕ್ಕೆ ತಿರುಗಿ ನೋಡಿದಾಗ ಅಲ್ಲಿಯೂ ಬೆಂಕಿಯನ್ನೇ ಕಾಣುವನು. ನಿಮ್ಮ ಪೈಕಿ ಪ್ರತಿಯೊಬ್ಬನೂ

ನರಕಾಗ್ನಿಯಿಂದ ಪಾರಾಗಲು ಪ್ರಯತ್ನಿಸಬೇಕು. ಅದು ಒಂದು ತುಂಡು ಖರ್ಜೂರದ ಮೂಲಕವಾದರೂ ಸರಿ. ಅದೂ ಸಾಧ್ಯವಾಗದಿದ್ದರೆ ಒಂದು ಒಳ್ಳೆಯ ಮಾತನ್ನಾದರೂ ಆಡಲಿ." (ಬುಖಾರಿ)

14. ಅಲ್ಲಾಹನ ಸ್ಮರಣೆ ಮತ್ತು ಕರುಣೆಯ ವೈಶಾಲ್ಯ

عَنْ أَبِىْ هُرَيْرَةَ رَضِىَ اللّٰهُ عَنْهُ، عَنِ النَّبِىِّ صَلَّى اللّٰهُ عَلَيْهِ وَسَلَّمَ ـ قَالَ: " اِنَّ لِلّٰهِ تَبَارَكَ وَتَعَالٰى مَلَائِكَةً ، سَيَّارَةً فُضُلاً يَتَتَغُوْنَ مَجَالِسَ الذِّكْرِ ـ فَاِذَا وَجَدُ مَجَالِسًا فِيْهِ ذِكْرٌ قَعَدُوْا مَعَهُمْ ، وَحَفَّ بَعْضُهُمْ بَعْضًا بِاَجْنِحَتِهِمْ حَتّٰى يَمْلَأُوْا مَا بَيْنَهُمْ وَبَيْنَ السَّمَاءِ الدُّنْيَا ، فَاِذَا انْصَرَفُوْا عَرَجُوْا وَصَعِدُوْا اِلَى السَّمَاءِ قَالَ: فَيَسْأَلُهُمُ اللّٰهُ عَزَّوَجَلَّ ، وَهُوَ أَعْلَمُ بِهِمْ: مِنْ أَيْنَ جِئْتُمْ ؟ فَيَقُوْلُوْنَ: جِئْنَا مِنْ عِنْدِ عِبَادٍ لَكَ فِىْ الْأَرْضِ يُسَبِّحُوْنَكَ وَيُكَبِّرُوْنَكَ ، وَيُهَلِّلُوْنَكَ ، وَيَحْمَدُوْنَكَ وَيَسْأَلُوْنَكَ قَالَ: وَمَا يَسْأَلُوْنِىْ ؟ قَالُوْا يَسْأَلُوْنَكَ جَنَّتَكَ ، قَالَ: وَهَلْ رَأَوْا جَنَّتِىْ ؟ قَالُوْا: لَا ، أَىْ رَبِّ ، قَالَ: فَكَيْفَ لَوْرَأَوْا جَنَّتِىْ؟ قَالُوْا: وَيَسْتَجِيْرُوْنَكَ ، قَالَ: وَمِمَّ يَسْتَجِيْرُوْنِىْ ؟ قَالُوْا: مِنْ نَارِكَ يَارَبِّ ، قَالَ: وَهَلْ رَأَوْا نَارِىْ؟ قَالُوْا: لَا ، قَالَ فَكَيْفَ لَوْ رَأَوْا نَارِىْ! قَالُوْا ؟ وَيَسْتَغْفِرُوْنَكَ ، قَالَ: فَيَقُوْلُ: قَدْ غَفَرْتُ لَهُمْ ، وَأَعْطَيْتُهُمْ مَا سَأَلُوْا ، وَأَجَرْتُهُمْ

مِمَّا اسْتَجَارُوْا۔ قَالُوْا، يَقُوْلُ: رَبِّ فِيْهِمْ فُلَانٌ، عَبْدٌ خَطَّاءٌ، اِنَّمَا مَرَّ فَجَلَسَ مَعَهُمْ۔ قَالَ: فَيَقُوْلُ: وَلَهُ غَفَرْتُ، هُمُ الْقَوْمُ لَا يَشْقَى بِهِمْ جَلِيْسُهُمْ۔" رواه مسلم (وكذلك البخارى والترمذى والنسائى)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನ ಕೆಲವು ಆಯ್ದ ಮಲಕ್‌ಗಳು (ದೇವಚರರು) ದಿಕ್ರ್‌ನ ಸಭೆಗಳನ್ನು ಹುಡುಕುತ್ತಾ ಸಂಚರಿಸುತ್ತಿರುತ್ತಾರೆ. ಎಲ್ಲಾದರೂ ಅಲ್ಲಾಹನ ದಿಕ್ರ್‌ನ (ಸ್ಮರಣೆಯ) ಸಭೆಗಳನ್ನು ಕಂಡರೆ ಅಲ್ಲಿಗೆ ಬಂದು ಜನರೊಡನೆ ಕುಳಿತುಕೊಳ್ಳುತ್ತಾರೆ. ಅವರು ಒಬ್ಬರು ಇನ್ನೊಬ್ಬರ ಮೇಲೆ ತಮ್ಮ ರೆಕ್ಕೆಗಳನ್ನು ಹರಡುತ್ತಾರೆ. ಅವರ ಮತ್ತು ಹತ್ತಿರದ ಆಕಾಶದ ಮಧ್ಯೆ ಇರುವುದೆಲ್ಲವನ್ನು ಅವರು ತುಂಬಿಕೊಳ್ಳುತ್ತಾರೆ. ಜನರು ಸಭೆಯಿಂದ ಎದ್ದು ಹೊರಟಾಗ ಅವರು ಆಕಾಶದತ್ತ ಸಾಗುತ್ತಾರೆ.

ಪ್ರವಾದಿ(ಸ) ಹೇಳಿದರು: ಅಲ್ಲಾಹನು ಆ ದೇವಚರರೊಂದಿಗೆ ಕೇಳುತ್ತಾನೆ, "ನೀವು ಎಲ್ಲಿಂದ ಬಂದಿರಿ?" (ವಸ್ತುತಃ ಅಲ್ಲಾಹ್ ಚೆನ್ನಾಗಿ ಅರಿತಿರುತ್ತಾನೆ.) ಅವರು ಹೇಳುತ್ತಾರೆ, "ಭೂಮುಖದ ಮೇಲೆ ನಿನ್ನ ಕೆಲವು ದಾಸರಿದ್ದಾರೆ. ನಾವು ಅವರ ಬಳಿಯಿಂದ ಬರುತ್ತಿದ್ದೇವೆ. ಅವರು ನಿನ್ನನ್ನು ಸ್ತುತಿಸುತ್ತಾರೆ. ನಿನ್ನ ಮಹಾನತೆಯನ್ನು ಕೊಂಡಾಡುತ್ತಾರೆ. ನಿನ್ನಿಂದ ಕೈಚಾಚಿ ಬೇಡುತ್ತಿದ್ದಾರೆ." ಅಲ್ಲಾಹ್ ಕೇಳುತ್ತಾನೆ, "ಅವರು ನನ್ನಿಂದ ಏನನ್ನು ಬೇಡುತ್ತಾರೆ?" ದೇವಚರರು ಹೇಳುತ್ತಾರೆ, "ಅವರು ನಿನ್ನಿಂದ ನಿನ್ನ ಸ್ವರ್ಗವನ್ನು ಬೇಡುತ್ತಾರೆ." ಅಲ್ಲಾಹ್ ಕೇಳುತ್ತಾನೆ, "ಅವರು ನನ್ನ ಸ್ವರ್ಗವನ್ನು ನೋಡಿದ್ದಾರೆಯೇ?" ದೇವಚರರು ಹೇಳುತ್ತಾರೆ, "ಇಲ್ಲ ನಮ್ಮ ಪ್ರಭೂ!" ಅಲ್ಲಾಹ್ ಹೇಳುತ್ತಾನೆ, "ಅವರು ನನ್ನ ಸ್ವರ್ಗವನ್ನು ನೋಡಿದರೆ ಏನಾಗಬಹುದು?" ತರುವಾಯ ದೇವಚರರು ಹೇಳುತ್ತಾರೆ, "ಅವರು ನಿನ್ನ ಅಭಯ ಯಾಚಿಸುತ್ತಾರೆ." ಅಲ್ಲಾಹ್ ಕೇಳುತ್ತಾನೆ, "ಯಾವುದರಿಂದ ಅವರು ನನ್ನ ಅಭಯ ಯಾಚಿಸುತ್ತಾರೆ?" ಅವರು ಹೇಳುತ್ತಾರೆ, "ನಿನ್ನ (ನರಕದ) ಅಗ್ನಿಯಿಂದ!" ಅಲ್ಲಾಹ್ ಕೇಳುತ್ತಾನೆ, "ಅವರು ನನ್ನ ಅಗ್ನಿಯನ್ನು ಕಂಡಿದ್ದಾರೆಯೇ?" ದೇವಚರರು ಇಲ್ಲವೆನ್ನುತ್ತಾರೆ. ಅಲ್ಲಾಹ್ ಹೇಳುತ್ತಾನೆ, "ಅವರು ನನ್ನ ಅಗ್ನಿಯನ್ನು ಕಂಡಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತು!" ಅನಂತರ ಅವರು ಹೇಳುತ್ತಾರೆ, "ಅವರು ನಿನ್ನಿಂದ ಕ್ಷಮೆ ಯಾಚಿಸುತ್ತಾರೆ."

ಪ್ರವಾದಿ(ಸ) ಹೇಳಿದರು: ಅಲ್ಲಾಹ್ ಹೇಳುವನು, “ನಾನು ಅವರಿಗೆ ಕ್ಷಮಾದಾನ ನೀಡಿದೆ, ಅವರು ನನ್ನಿಂದ ಯಾಚಿಸಿದ್ದೆಲ್ಲವನ್ನೂ ನಾನು ದಯಪಾಲಿಸಿದೆ ಮತ್ತು ಅವರು ಯಾವುದರಿಂದ ನನ್ನ ಅಭಯ ಯಾಚಿಸುತ್ತಿದ್ದರೋ ಅದರಿಂದ ನಾನು ಅಭಯ ನೀಡಿದೆ.” ಪ್ರವಾದಿ(ಸ) ಹೇಳಿದರು: ದೇವಚರರು ಹೇಳುವರು, “ಓ ನಮ್ಮ ಪ್ರಭೂ! ಅವರಲ್ಲಿ ಒಬ್ಬ ಪಾಪಿ ದಾಸನೂ ಇದ್ದಾನೆ. ಅವನು ಆ ಸಭೆ ನಡೆಯುತ್ತಿದ್ದಾಗ, ಅಲ್ಲಿಂದ ಹಾದು ಹೋಗುತ್ತಿದ್ದವನು ಅಲ್ಲಿ ಕುಳಿತುಕೊಂಡನು.” ಪ್ರವಾದಿ(ಸ) ಹೇಳಿದರು: ಅಲ್ಲಾಹ್ ಹೇಳುವನು, “ಅವನನ್ನೂ ನಾನು ಕ್ಷಮಿಸಿದ್ದೇನೆ. ಅವರ ಸಭೆಯಲ್ಲಿ ಕುಳಿತುಕೊಳ್ಳುವವನು ನತದೃಷ್ಟನಾಗಲಾರನು.”

(ಬುಖಾರಿ, ಮುಸ್ಲಿಮ್, ತಿರ್ಮಿದಿ, ನಸಾಈ)

15. ಅಲ್ಲಾಹನ ಸ್ಮರಣೆಯ ಮಹತ್ವ

عَنْ أَبِىْ هُرَيْرَةَ رَضِىَ اللّٰهُ عَنْهُ، قَالَ: قَالَ النَّبِىُّ صَلَّى اللّٰهُ عَلَيْهِ وَسَلَّمَ: " يَقُوْلُ اللّٰهُ تَعَالٰى: أَنَا عِنْدَ ظَنِّ عَبْدِىْ بِىْ ، وَأَنَا مَعَهُ اِذَا ذَكَرَنِىْ ، فَاِنْ ذَكَرَنِىْ فِىْ نَفْسِهٖ ذَكَرْتُهُ فِىْ نَفْسِىْ ۔ وَاِنْ ذَكَرَنِىْ فِىْ مَلَإٍ ، ذَكَرْتُهُ فِىْ مَلَإٍ خَيْرٍ مِنْهُمْ وَاِنْ تَقَرَّبَ اِلَىَّ بِشِبْرٍ ، تَقَرَّبْتُ اِلَيْهِ ذِرَاعًا ، وَاِنْ تَقَرَّبَ اِلَىَّ ذِرَاعًا ، تَقَرَّبْتُ اِلَيْهِ بَاعًا ، وَاِنْ أَتَانِىْ يَمْشِىْ ، أَتَيْتُهُ هَرْوَلَةً ۔" رواه البخارى (وكذلك مسلم والترمذى وابن ماجه)

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, “ನನ್ನ ದಾಸನು ನನ್ನ ಬಗ್ಗೆ ಯಾವ ಭಾವನೆಯನ್ನಿರಿಸುತ್ತಾನೋ ನಾನು ಹಾಗೆಯೇ ಇದ್ದೇನೆ. ಅವನು ನನ್ನನ್ನು ಸ್ಮರಿಸುವಾಗ, ನಾನು ಅವನ ಜೊತೆಗಿರುತ್ತೇನೆ. ಅವನು ನನ್ನನ್ನು ಮನಸ್ಸಿನಲ್ಲಿ ಸ್ಮರಿಸುವಾಗ ನಾನೂ

ಅವನನ್ನು ಮನಸ್ಸಿನಲ್ಲಿ ಸ್ಮರಿಸುತ್ತೇನೆ. ಅವನು ನನ್ನನ್ನು ಜನರ ಕೂಟದಲ್ಲಿ ಸ್ಮರಿಸುವಾಗ ನಾನು ಅವನನ್ನು ಅವರಿಗಿಂತ ಉತ್ತಮ ಕೂಟದಲ್ಲಿ ಸ್ಮರಿಸುತ್ತೇನೆ. ಅವನು ನನ್ನತ್ತ ಒಂದು ಗೇಣಿನಷ್ಟು ಮುಂದುವರಿಯುವಾಗ ನಾನು ಅವನತ್ತ ಒಂದು ಕೈಯಷ್ಟು ಮುಂದುವರಿಯುತ್ತೇನೆ. ಅವನು ನನ್ನೆಡೆಗೆ ಒಂದು ಕೈಯಷ್ಟು ಮುಂದೆ ಬಂದಾಗ ನಾನು ಅವನೆಡೆಗೆ ಎರಡು ಕೈಯಷ್ಟು ಮುಂದೆ ಸಾಗುತ್ತೇನೆ. ಅವನು ಒಂದು ವೇಳೆ ನಡೆದುಕೊಂಡು ಬರುತ್ತಾನೆಂದಾದರೆ ನಾನು ಅವನೆಡೆಗೆ ಓಡಿಕೊಂಡು ಹೋಗುತ್ತೇನೆ."

(ಬುಖಾರಿ, ಮುಸ್ಲಿಮ್, ತಿರ್ಮಿದಿ, ಇಬ್ನುಮಾಜಃ)

16. ಅಲ್ಲಾಹನ ಕರುಣೆ ಅಪಾರವಾಗಿದೆ

عَنِ ابْنِ عَبَّاسٍ رَضِيَ اللّٰهُ عَنْهُمَا، عَنِ النَّبِيِّ صَلَّى اللّٰهُ عَلَيْهِ وَسَلَّمَ، فِيمَا يَرْوِي عَنْ رَبِّهِ عَزَّوَجَلَّ، قَالَ: "إِنَّ اللّٰهَ كَتَبَ الْحَسَنَاتِ وَالسَّيِّئَاتِ، ثُمَّ بَيَّنَ ذَلِكَ: فَمَنْ هَمَّ بِحَسَنَةٍ فَلَمْ يَعْمَلْهَا، كَتَبَهَا اللّٰهُ لَهُ عِنْدَهُ حَسَنَةً كَامِلَةً، فَإِنْ هُوَ هَمَّ بِهَا فَعَمِلَهَا، كَتَبَهَا اللّٰهُ لَهُ عِنْدَهُ عَشْرَ حَسَنَاتٍ، إِلَى سَبْعِمِائَةِ ضِعْفٍ، إِلَى أَضْعَافٍ كَثِيرَةٍ وَمَنْ هَمَّ بِسَيِّئَةٍ فَلَمْ يَعْمَلْهَا، كَتَبَهَا اللّٰهُ لَهُ عِنْدَهُ حَسَنَةً كَامِلَةً، فَإِنْ هُوَ هَمَّ بِهَا فَعَمِلَهَا، كَتَبَهَا اللّٰهُ سَيِّئَةً وَاحِدَةً۔" (رواه البخارى ومسلم)

ಇಬ್ನು ಅಬ್ಬಾಸ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಪಾಪ ಮತ್ತು ಪುಣ್ಯಗಳನ್ನು ಬರೆದಿಟ್ಟಿದ್ದಾನೆ ಹಾಗೂ ಅದನ್ನು ಸ್ಪಷ್ಟವಾಗಿ ವಿವರಿಸಿ ಹೇಳಿದ್ದಾನೆ. ಒಬ್ಬನು ಒಂದು ಸತ್ಕರ್ಮ ಮಾಡಲು ಬಯಸಿ ಅದನ್ನು ಮಾಡದೆ ಇದ್ದರೆ, ಅಲ್ಲಾಹನು ತನ್ನ ವತಿಯಿಂದ ಅವನ ಲೆಕ್ಕದಲ್ಲಿ ಒಂದು ಪೂರ್ಣ ಪ್ರತಿಫಲವನ್ನು ಬರೆಯುತ್ತಾನೆ. ಅವನು ಅದನ್ನು ಮಾಡಿದರೆ, ಅಲ್ಲಾಹನು ಅವನ

ಲೆಕ್ಕಪತ್ರದಲ್ಲಿ ಹತ್ತರಿಂದ ಏಳ್ನೂರು ಪಟ್ಟುಗಳಷ್ಟು ಪುಣ್ಯವನ್ನು ಬರೆಯುತ್ತಾನೆ. ಅಷ್ಟೇ ಅಲ್ಲ, ಅದಕ್ಕಿಂತಲೂ ಹೆಚ್ಚು ಪುಣ್ಯಗಳನ್ನು ಬರೆಯುತ್ತಾನೆ. ಇನ್ನು ಒಬ್ಬನು ಒಂದು ದುಷ್ಕರ್ಮದ ಸಂಕಲ್ಪ ಮಾಡಿ ಅದನ್ನು ಕೃತಿಗಿಳಿಸದೆ ಇದ್ದರೆ, ಅಲ್ಲಾಹನು ತನ್ನ ವತಿಯಿಂದ ಅವನ ಲೆಕ್ಕಪತ್ರದಲ್ಲಿ ಒಂದು ಪೂರ್ಣ ಪ್ರತಿಫಲವನ್ನು ಬರೆಯುತ್ತಾನೆ. ಇನ್ನು ಅವನು ತನ್ನ ಸಂಕಲ್ಪದಂತೆ ಅದನ್ನು ಎಸಗಿಬಿಟ್ಟರೆ, ಅಲ್ಲಾಹನು ಅವನ ಲೆಕ್ಕಪತ್ರದಲ್ಲಿ ಕೇವಲ ಒಂದು ಪಾಪವನ್ನು ಬರೆಯುತ್ತಾನೆ."

(ಮುಸ್ಲಿಮ್, ಬುಖಾರಿ)

17. ಅಲ್ಲಾಹನು ನಿರಪೇಕ್ಷನು

عَنْ أَبِي ذَرٍّ الْغَفَّارِيِّ رَضِيَ اللّٰهُ عَنْهُ، عَنِ النَّبِيِّ صَلَّى اللّٰهُ عَلَيْهِ وَسَلَّمَ، فِيمَا يَرْوِيهِ عَنْ رَبِّهِ عَزَّوَجَلَّ، أَنَّهُ قَالَ: "يَا عِبَادِيْ: اِنِّيْ حَرَّمْتُ الظُّلْمَ عَلٰى نَفْسِيْ وَجَعَلْتُهُ بَيْنَكُمْ مُحَرَّمًا فَلَا تَظَالَمُوْا، يَا عِبَادِيْ: كُلُّكُمْ ضَالٌّ اِلَّا مَنْ هَدَيْتُهُ فَاسْتَهْدُوْنِيْ أَهْدِكُمْ، يَا عِبَادِيْ: كُلُّكُمْ جَائِعٌ اِلَّا مَنْ أَطْعَمْتُهُ فَاسْتَطْعِمُوْنِيْ أُطْعِمْكُمْ يَا عِبَادِيْ: كُلُّكُمْ عَارٍ اِلَّا مَنْ كَسَوْتُهُ فَاسْتَكْسُوْنِيْ أَكْسُكُمْ. يَا عِبَادِيْ: اِنَّكُمْ تُخْطِئُوْنَ بِاللَّيْلِ وَالنَّهَارِ، وَأَنَا أَغْفِرُ الذُّنُوْبَ جَمِيْعًا، فَاسْتَغْفِرُوْنِيْ أَغْفِرْ لَكُمْ.

يَا عِبَادِيْ: اِنَّكُمْ لَنْ تَبْلُغُوْا ضُرِّيْ فَتَضُرُّوْنِيْ، وَلَنْ تَبْلُغُوْا نَفْعِيْ فَتَنْفَعُوْنِيْ. يَا عِبَادِيْ، لَوْ أَنَّ أَوَّلَكُمْ وَآخِرَكُمْ وَاِنْسَكُمْ وَجِنَّكُمْ كَانُوْا عَلٰى أَتْقٰى قَلْبِ رَجُلٍ وَاحِدٍ مِّنْكُمْ، مَا زَادَ ذٰلِكَ فِيْ مُلْكِيْ شَيْئًا.

يَا عِبَادِيْ، لَوْ أَنَّ أَوَّلَكُمْ وَآخِرَكُمْ وَإِنْسَكُمْ وَجِنَّكُمْ كَانُوْا عَلٰى أَفْجَرِ قَلْبِ رَجُلٍ وَاحِدٍ مِّنْكُمْ، مَا نَقَصَ ذٰلِكَ فِيْ مُلْكِيْ شَيْئًا. يَا عِبَادِيْ: لَوْ أَنَّ أَوَّلَكُمْ وَآخِرَكُمْ وَ إِنْسَكُمْ وَجِنَّكُمْ قَامُوْا فِيْ صَعِيْدٍ وَاحِدٍ، فَسَأَلُوْنِيْ فَأَعْطَيْتُ كُلَّ وَاحِدٍ مَسْأَلَتَهُ، مَا نَقَصَ ذٰلِكَ مِمَّا عِنْدِيْ إِلَّا كَمَا يَنْقُصُ الْمِخْيَطُ إِذَا أُدْخِلَ الْبَحْرَ يَاعِبَادِيْ: إِنَّمَا هِيَ أَعْمَالُكُمْ أُحْصِيْهَا لَكُمْ، ثُمَّ أُوَفِّيْكُمْ إِيَّاهَا، فَمَنْ وَجَدَ خَيْرًا فَلْيَحْمَدِ اللّٰهَ وَمَنْ وَجَدَ غَيْرَ ذٰلِكَ فَلَا يَلُوْمَنَّ إِلَّا نَفْسَهُ."

رواه مسلم (وكذلك الترمذى وابن ماجه)

ಅಬೂದರ್ರ್ ಗಿಫ್ಫಾರಿ(ರ) ಅವರಿಂದ ವರದಿ. ಪ್ರವಾದಿ(ಸ) ತಮ್ಮ ಪ್ರಭುವಿನ ಕಡೆಯಿಂದ ವಿವರಿಸುತ್ತಾರೆ:

ಅಲ್ಲಾಹ್ ಹೇಳುತ್ತಾನೆ, "ಓ ನನ್ನ ದಾಸರೇ! (ಯಾರ ಮೇಲಾದರೂ) ನಾನು ಅಕ್ರಮವೆಸಗುವುದನ್ನು ನನ್ನ ಮೇಲೆ ನಿಷೇಧಿಸಿದ್ದೇನೆ. ನಿಮ್ಮ ಮೇಲೂ ಈ ಕೃತ್ಯವನ್ನು ನಿಷೇಧಿಸಿದ್ದೇನೆ. ಆದ್ದರಿಂದ ನೀವು ಪರಸ್ಪರರ ಮೇಲೆ ಅಕ್ರಮವೆಸಗಬೇಡಿರಿ. ಓ ನನ್ನ ದಾಸರೇ! ನಾನು ಸನ್ಮಾರ್ಗ ತೋರಿಸಿದವನ ಹೊರತು ನೀವೆಲ್ಲರೂ ದಾರಿತಪ್ಪಿದವರಾಗಿದ್ದೀರಿ. ಆದ್ದರಿಂದ ನನ್ನಿಂದ ಸನ್ಮಾರ್ಗವನ್ನು ಬೇಡಿರಿ. ನಾನು ನಿಮಗೆ ಸನ್ಮಾರ್ಗ ತೋರಿಸುತ್ತೇನೆ. ಓ ನನ್ನ ದಾಸರೇ! ನಾನು ಉಣಿಸಿದವನ ಹೊರತು ನೀವೆಲ್ಲರೂ ಹಸಿದವರಾಗಿದ್ದೀರಿ. ಆದ್ದರಿಂದ ನನ್ನಿಂದ ಆಹಾರ ಬೇಡಿರಿ. ನಾನು ನಿಮಗೆ ಉಣಿಸುವೆನು. ಓ ನನ್ನ ದಾಸರೇ! ನಾನು ಉಡಿಸಿದವನ ಹೊರತು ನೀವೆಲ್ಲರೂ ನಗ್ನರಾಗಿದ್ದೀರಿ. ಆದ್ದರಿಂದ ನನ್ನಿಂದ ಉಡುಪು ಬೇಡಿರಿ. ನಾನು ನಿಮಗೆ ಉಡಿಸುವೆನು."

"ಓ ನನ್ನ ದಾಸರೇ! ನೀವು ಹಗಲೂ ರಾತ್ರಿಯೂ ತಪ್ಪುಗಳನ್ನು ಮಾಡುತ್ತೀರಿ. ನಿಮ್ಮ ಎಲ್ಲ ತಪ್ಪುಗಳನ್ನು ನಾನೇ ಕ್ಷಮಿಸುತ್ತೇನೆ. ಆದ್ದರಿಂದ ನನ್ನಿಂದ ಮಾತ್ರ ಕ್ಷಮೆ ಯಾಚಿಸಿರಿ. ನಾನು ನಿಮ್ಮನ್ನು ಕ್ಷಮಿಸುವೆನು."

“ಓ ನನ್ನ ದಾಸರೇ! ನೀವೆಲ್ಲರೂ ಸೇರಿ ನನಗೇನಾದರೂ ಹಾನಿಯುಂಟು ಮಾಡಲು ಪ್ರಯತ್ನಿಸಿದರೆ, ನನಗೇನೂ ಹಾನಿ ಮಾಡಲಾರಿರಿ. ನೀವೆಲ್ಲರೂ ಸೇರಿ ನನಗೇನಾದರೂ ಲಾಭವುಂಟು ಮಾಡಬಯಸಿದರೆ ನನಗೇನೂ ಲಾಭವುಂಟು ಮಾಡಲಾರಿರಿ.”

“ಓ ನನ್ನ ದಾಸರೇ! ನಿಮ್ಮಲ್ಲಿನ ಆದಿಯವನೂ ಅಂತ್ಯದವನೂ ಮಾನವರೂ ಜಿನ್ನ್‌ಗಳೂ ನಿಮ್ಮಲ್ಲಿನ ಅತ್ಯಂತ ಧರ್ಮನಿಷ್ಠನಂತಾದರೂ ನನ್ನ ಸಾಮ್ರಾಜ್ಯದಲ್ಲೇನೂ ಹೆಚ್ಚಳ ಮಾಡಲಾರಿರಿ. ನಿಮ್ಮಲ್ಲಿನ ಆದಿಯವನೂ ಅಂತ್ಯದವನೂ ಮಾನವರೂ ಜಿನ್ನ್‌ಗಳೂ ನಿಮ್ಮಲ್ಲಿನ ಅತ್ಯಂತ ದುಷ್ಟನಂತಾದರೂ ನನ್ನ ಸಾಮ್ರಾಜ್ಯದಲ್ಲೇನೂ ಕೊರತೆ ಮಾಡಲಾರಿರಿ.”

“ಓ ನನ್ನ ದಾಸರೇ! ನಿಮ್ಮಲ್ಲಿನ ಆದಿಯವನೂ ಅಂತ್ಯದವನೂ ಮಾನವರೂ ಜಿನ್ನ್‌ಗಳೂ ಒಟ್ಟು ಸೇರಿ ನನ್ನೊಂದಿಗೆ ಬೇಡಿದರೆ ಮತ್ತು ನಾನು ಎಲ್ಲರ ಬೇಡಿಕೆಗಳನ್ನು ಪೂರೈಸಿದರೂ ನನ್ನ ಖಜಾನೆಯಲ್ಲಿ ಸೂಜಿಯನ್ನು ಸಮುದ್ರದಲ್ಲಿ ಮುಳುಗಿಸಿದರೆ ಆಗುವಷ್ಟೂ ಅದರಿಂದ ಕಡಿಮೆಯಾಗಲಾರದು.”

“ಓ ನನ್ನ ದಾಸರೇ! ಖಂಡಿತವಾಗಿಯೂ ನಾನು ನಿಮ್ಮ ಕರ್ಮಗಳನ್ನು ಎಣಿಸುತ್ತಿದ್ದೇನೆ ಮತ್ತು ಅವುಗಳ ಸಂಪೂರ್ಣ ಪ್ರತಿಫಲವನ್ನು ನಿಮಗೆ ನೀಡುವೆನು. ಇನ್ನು ಯಾರಿಗೆ ಒಳಿತು ಸಿಕ್ಕಿತೋ ಅವನು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲಿ. ಅದಕ್ಕೆ ವ್ಯತಿರಿಕ್ತವಾಗಿ ಸಿಕ್ಕಿದವನು ತನ್ನನ್ನು ತಾನೇ ಹಳಿಯಲಿ.”

(ಮುಸ್ಲಿಮ್, ತಿರ್ಮಿದಿ, ಇಬ್ನುಮಾಜಃ)

18. ಜನರ ಹಕ್ಕುಗಳ ಮಹತ್ವ

عَنْ أَبِي هُرَيْرَةَ رَضِيَ اللهُ عَنْهُ ، قَالَ : قَالَ رَسُوْلُ اللهِ صَلَّى اللهُ عَلَيْهِ وَسَلَّمَ: إِنَّ اللهَ عَزَّوَجَلَّ يَقُوْلُ يَوْمَ الْقِيَامَةِ : "يَا ابْنَ آدَمَ ، مَرِضْتُ فَلَمْ تَعُدْنِيْ ، قَالَ: يَا رَبِّ وَكَيْفَ أَعُوْدُكَ وَأَنْتَ رَبُّ الْعَالَمِيْنَ؟ قَالَ: أَمَا عَلِمْتَ أَنَّ عَبْدِيْ فُلَانًا مَرِضَ فَلَمْ تَعُدْهُ - أَمَّا عَلِمْتَ أَنَّكَ لَوْ عُدْتَهُ لَوَجَدْتَنِيْ عِنْدَهُ يَا ابْنَ آدَمَ: اسْتَطْعَمْتُكَ فَلَمْ تُطْعِمْنِيْ ، قَالَ: يَا رَبِّ

وَكَيْفَ أُطْعِمُكَ وَأَنْتَ رَبُّ الْعَالَمِينَ ؟ قَالَ أَمَا عَلِمْتَ أَنَّهُ اسْتَطْعَمَكَ
عَبْدِيْ فُلَانٌ ، فَلَمْ تُطْعِمْهُ ؟ أَمَا عَلِمْتَ أَنَّهُ لَوْ أَطْعَمْتَهُ لَوَجَدْتَ ذٰلِكَ
عِنْدِيْ - يَا ابْنَ آدَمَ : اسْتَسْقَيْتُكَ ، فَلَمْ تَسْقِنِيْ قَالَ: يَا رَبِّ ، كَيْفَ
أَسْقِيْكَ وَأَنْتَ رَبُّ الْعَالَمِينَ؟ قَالَ: اسْتَسْقَاكَ عَبْدِيْ فُلَانٌ فَلَمْ
تَسْقِهِ ، أَمَا إِنَّكَ لَوْ سَقَيْتَهُ لَوَجَدْتَ ذٰلِكَ عِنْدِيْ-" (رواه مسلم)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ನಿರ್ಣಾಯಕ ದಿನದಂದು ಹೇಳುವನು, "ಆದಮನ ಪುತ್ರನೇ (ಮಾನವನೇ)! ನಾನು ರೋಗಿಯಾಗಿದ್ದೆ. ಆದರೆ ನೀನು ನನ್ನನ್ನು ಸಂದರ್ಶಿಸಲು ಬರಲಿಲ್ಲ." ದಾಸನು ಹೇಳುವನು, "ನನ್ನ ಪ್ರಭೂ! ನೀನಂತೂ ಸರ್ವಲೋಕಗಳ ಪ್ರಭುವಾಗಿರುವೆ. ನಾನು ನಿನ್ನನ್ನು ಹೇಗೆ ಸಂದರ್ಶಿಸಲಿ?" ಅಲ್ಲಾಹ್ ಹೇಳುವನು, "ನನ್ನ ಇಂತಿಂತಹ ಒಬ್ಬ ದಾಸನು ಕಾಯಿಲೆ ಬಿದ್ದಿದ್ದನು. ಆದರೆ ನೀನು ಅವನನ್ನು ನೋಡಲು ಹೋಗಲಿಲ್ಲ. ಒಂದು ವೇಳೆ ನೀನು ಅವನ ಸಂದರ್ಶನಕ್ಕೆ ಹೋಗುತ್ತಿದ್ದರೆ, ಅಲ್ಲಿ ನನ್ನನ್ನು ಕಾಣುತ್ತಿದ್ದೆ ಎಂದು ನಿನಗೆ ತಿಳಿಯದೆ? ಓ ಮಾನವಾ! ನಾನು ನಿನ್ನಲ್ಲಿ ಆಹಾರ ಕೇಳಿದ್ದೆ. ಆದರೆ ನೀನು ನನಗೆ ಉಣಿಸಲಿಲ್ಲ." ದಾಸನು ಹೇಳುವನು, "ನೀನು ಸರ್ವಲೋಕಗಳ ಪ್ರಭುವಾಗಿರುವಾಗ, ನಾನು ಹೇಗೆ ನಿನಗೆ ಉಣಿಸಲಿ?" ಅಲ್ಲಾಹ್ ಹೇಳುವನು, "ನನ್ನ ಇಂತಿಂತಹ ಒಬ್ಬ ದಾಸನು ನಿನ್ನಲ್ಲಿ ಆಹಾರ ಬೇಡಿದನು. ಆದರೆ ನೀನು ಅವನಿಗೆ ಉಣಿಸಲಿಲ್ಲ. ನೀನು ಅವನಿಗೆ ಉಣಿಸುತ್ತಿದ್ದರೆ, ಅದರ ಪ್ರತಿಫಲವನ್ನು ನನ್ನಿಂದ ಪಡೆಯುತ್ತಿದ್ದಿಯೆಂದು ನಿನಗೆ ತಿಳಿದಿಲ್ಲವೇ?" ಅಲ್ಲಾಹ್ ಹೇಳುವನು, "ಓ ಮಾನವಾ! ನಾನು ನಿನ್ನಲ್ಲಿ ನೀರು ಕೇಳಿದೆ. ಆದರೆ ನೀನು ನನಗೆ ಕುಡಿಸಲಿಲ್ಲ." ದಾಸನು ಹೇಳುವನು, "ನನ್ನ ಪ್ರಭೂ! ನೀನು ಸರ್ವ ಲೋಕಗಳ ಪ್ರಭುವಾಗಿರುವಾಗ, ನಾನೆಂತು ನಿನಗೆ ನೀರುಣಿಸಲಿ?" ಅಲ್ಲಾಹ್ ಹೇಳುವನು, "ನನ್ನ ಇಂತಿಂತಹ ದಾಸನು ನಿನ್ನಲ್ಲಿ ನೀರು ಕೇಳಿದ್ದನು. ಆದರೆ ನೀನು ಅವನಿಗೆ ನೀರು ಕುಡಿಸಲಿಲ್ಲ. ಕೇಳು! ಒಂದು ವೇಳೆ ನೀನು ಅವನಿಗೆ ನೀರು ಕುಡಿಸುತ್ತಿದ್ದರೆ, ಅದರ ಪ್ರತಿಫಲವನ್ನು ನೀನು ನನ್ನ ಬಳಿ ಪಡೆಯುತ್ತಿದ್ದೆ." **(ಮುಸ್ಲಿಮ್)**

19. ಮಹಾನತೆಯು ದೇವನ ಹಕ್ಕಾಗಿದೆ

عَنْ أَبِىْ هُرَيْرَةَ رَضِىَ اللّٰهُ عَنْهُ، قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : قَالَ اللّٰهُ عَزَّوَجَلَّ : " الْكِبْرِيَاءُ رِدَائِىْ ، وَالْعَظْمَةُ اِزَارِىْ ، فَمَنْ نَازَعَنِىْ وَاحِدًا مِنْهُمَا ، قَذَفْتُهُ فِىْ النَّارِ "

رواه ابوداؤد (وذلك ابن ماجه وأحمد بأسانيد صحيحة)

ಅಬುಹುರ್ರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ಅಹಂಕಾರವು ನನ್ನ ಉಡುಪಾಗಿದೆ. ಮಹಾನತೆಯು ನನ್ನ ಇಜಾರವಾಗಿದೆ. ಈ ಎರಡು ಗುಣಗಳಲ್ಲಿ ನನ್ನೊಂದಿಗೆ ಸ್ಪರ್ಧಿಸುವವನನ್ನು ನಾನು ನರಕಾಗ್ನಿಗೆ ಎಸೆದುಬಿಡುವೆನು." (ಅಬೂದಾವೂದ್, ಇಬ್ನುಮಾಜಃ, ಅಹ್ಮದ್)

20. ಸಂಧಾನದ ಮೂಲಕ ಮೋಕ್ಷ

عَنْ أَبِىْ هُرَيْرَةَ رَضِىَ اللّٰهُ عَنْهُ، أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ، قَالَ : " تُفْتَحُ أَبْوَابُ الْجَنَّةِ يَوْمَ الإِثْنَيْنِ ، وَيَوْمَ الْخَمِيْسِ ، فَيَغْفِرُ لِكُلِّ عَبْدٍ لَا يُشْرِكُ بِاللّٰهِ شَيْئًا ، اِلَّا رَجُلًا كَانَتْ بَيْنَهُ وَبَيْنَ أَخِيْهِ شَحْنَاءُ ، فَيُقَالُ: أَنْظِرُوْا هٰذَيْنِ حَتّٰى يَصْطَلِحَا ، أَنْظِرُوْا هٰذَيْنِ حَتّٰى يَصْطَلِحَا ، أَنْظِرُوْا هٰذَيْنِ حَتّٰى يَصْطَلِحَا۔"

رواه مسلم (وكذلك مالك وأبوداؤد)

ಅಬೂಹುರ್ರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

"ಸ್ವರ್ಗದ ಬಾಗಿಲುಗಳನ್ನು ಸೋಮವಾರ ಮತ್ತು ಗುರುವಾರ ತೆರೆದಿಡಲಾಗುತ್ತದೆ.

ಅಲ್ಲಾಹನ ಜೊತೆ ಶಿರ್ಕ್ ಮಾಡದ ಪ್ರತಿಯೊಬ್ಬ ದಾಸನನ್ನು ಕ್ಷಮಿಸಲಾಗುತ್ತದೆ. ಆದರೆ ಒಬ್ಬನಿಗೆ ತನ್ನ ಸಹೋದರನೊಂದಿಗೆ ವಿರಸವಿದ್ದರೆ, 'ಅವರಿಬ್ಬರು ಪರಸ್ಪರ ಸಂಧಾನ ಮಾಡುವ ವರೆಗೆ ಅವರ ಪ್ರಕರಣವನ್ನು ಮುಂದೂಡಿರಿ' (ಮೂರು ಬಾರಿ) ಎಂದು ನಿರಂತರ ಘೋಷಿಸಲಾಗುತ್ತದೆ." **(ಮುಸ್ಲಿಮ್, ಅಬೂದಾವೂದ್, ಮಾಲಿಕ್)**

21. ಮೂರು ವಿಧದ ಜನರ ವಿರುದ್ಧ ಅಲ್ಲಾಹನ ದಾವೆ

عَنْ أَبِي هُرَيْرَةَ رَضِيَ اللّٰهُ عَنْهُ، عَنِ النَّبِيِّ صَلَّى اللّٰهُ عَلَيْهِ وَسَلَّمَ، قَالَ: قَالَ اللّٰهُ تَعَالٰى: "ثَلَاثَةٌ أَنَا خَصْمُهُمْ يَوْمَ الْقِيَامَةِ: رَجُلٌ أَعْطٰى بِي ثُمَّ غَدَرَ، وَرَجُلٌ بَاعَ حُرًّا فَأَكَلَ ثَمَنَهُ وَرَجُلٌ اسْتَاجَرَ أَجِيرًا فَاسْتَوْفٰى مِنْهُ وَلَمْ يُعْطِهِ أَجْرَهُ." رواه البخارى (وكذلك ابن ماجه)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ನಿರ್ಣಾಯಕ ದಿನದಂದು ಮೂವರು ವ್ಯಕ್ತಿಗಳ ವಿರುದ್ಧವಾಗಿ ನಾನೇ ದಾವೆ ಹೂಡುವೆನು. ಒಬ್ಬನು ನನ್ನ ಆಣೆ ಹಾಕಿ ವಾಗ್ದಾನ ಮಾಡಿದ ನಂತರ ಅದನ್ನು ಮುರಿದವನು. ಇನ್ನೊಬ್ಬನು ಸ್ವತಂತ್ರ ವ್ಯಕ್ತಿಯನ್ನು ಮಾರಿ ಅದರಿಂದ ಬಂದ ಹಣವನ್ನು ತಿಂದವನು. ಮೂರನೆಯವನು ಒಬ್ಬ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿ ಅವನಿಂದ ಪೂರ್ಣ ಕೆಲಸ ಮಾಡಿಸಿದ ಬಳಿಕ ಅವನ ಮಜೂರಿಯನ್ನು ಪಾವತಿಸದವನು."

(ಬುಖಾರಿ, ಇಬ್ನುಮಾಜಃ, ಅಹ್ಮದ್)

22. ತನ್ನನ್ನು ನಿಕೃಷ್ಟನೆಂದು ಭಾವಿಸಬಾರದು

عَنْ أَبِي سَعِيدٍ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ: "لَا يَحْقِرُ أَحَدُكُمْ نَفْسَهُ- قَالُوا: يَا رَسُوْلَ اللّٰهِ، كَيْفَ يَحْقِرُ أَحَدُنَا نَفْسَهُ؟

قَالَ: يَرَى أَمْرَ اللهِ عَلَيْهِ فِيْهِ مَقَالٌ ، ثُمَّ لَا يَقُوْلُ فِيْهِ ، فَيَقُوْلُ اللهُ عَزَّوَجَلَّ
لَهُ يَوْمَ الْقِيَامَةِ : مَا مَنَعَكَ أَنْ تَقُوْلَ فِيْ كَذَا وَكَذَا ؟ فَيَقُوْلُ خَشْيَةُ النَّاسِ،
فَيَقُوْلُ : فَإِيَّايَ كُنْتَ أَحَقَّ أَنْ تَخْشَى ـ" (رواه ابن ماجه بسند صحيح)

ಅಬೂಸಈದ್(ರ) ವರದಿ ಮಾಡುತ್ತಾರೆ. ಪ್ರವಾದಿ(ಸ) ಹೇಳಿದರು:

"ನಿಮ್ಮಲ್ಲಿ ಯಾರೂ ತನ್ನನ್ನು ತಾನೇ ನಿಕೃಷ್ಟನೆಂದು ಭಾವಿಸಬಾರದು." ಸಹಾಬಿಗಳು ಕೇಳಿದರು, "ನಮ್ಮಲ್ಲಿ ಯಾರಾದರೂ ತನ್ನನ್ನು ನಿಕೃಷ್ಟನೆಂದು ಭಾವಿಸುವುದು ಹೇಗೆ?" ಪ್ರವಾದಿ(ಸ) ಹೇಳಿದರು, "ಒಬ್ಬನು ಅಲ್ಲಾಹನ ವಿಷಯದಲ್ಲಿ ಏನಾದರೂ ದೃಷ್ಟಾಂತ ನೋಡುತ್ತಾನೆ. ಅವನು ಅದನ್ನು ಹೇಳಬೇಕಾಗಿತ್ತು. ಆದರೆ ಅವನು ಹೇಳುವುದಿಲ್ಲ, ನಿರ್ಣಾಯಕ ದಿನದಂದು ಅಲ್ಲಾಹನು 'ನೀನು ಇಂತಿಂತಹ ವಿಷಯದಲ್ಲಿ ಹೇಳದಿರಲು ನಿನಗೆ ಏನು ತಡೆಯಾಯಿತು?' ಎಂದು ಅವನೊಡನೆ ಕೇಳುವನು. ಜನರ ಭಯವೆಂದು ಅವನು ಹೇಳುವನು. ಆಗ ಅಲ್ಲಾಹ್, 'ನೀನು ನನ್ನನ್ನು ಮಾತ್ರ ಭಯಪಡಬೇಕಾದುದು ನಿನಗೆ ಭೂಷಣವಾಗಿತ್ತು' ಎನ್ನುವನು." (ಇಬ್ನುಮಾಜಃ)

23. ಪರಸ್ಪರ ಪ್ರೀತಿಸುವವರು ಅಲ್ಲಾಹನ ನೆರಳಲ್ಲಿ

عَنْ أَبِيْ هُرَيْرَةَ رَضِيَ اللهُ عَنْهُ ، قَالَ: قَالَ رَسُوْلُ اللهِ صَلَّى اللهُ عَلَيْهِ
وَسَلَّمَ : إِنَّ اللهَ يَقُوْلُ يَوْمَ الْقِيَامَةِ : " أَيْنَ الْمُتَحَابُّوْنَ بِجَلَالِيْ ؟ اَلْيَوْمَ
أُظِلُّهُمْ فِيْ ظِلِّيْ يَوْمَ لَا ظِلَّ إِلَّا ظِلِّيْ ـ"
رواه البخاري (وكذلك مالك)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ನಿರ್ಣಾಯಕ ದಿನದಂದು ಘೋಷಿಸುವನು, "ನನ್ನ ಪ್ರತಾಪ ದಿಂದಾಗಿ ಪರಸ್ಪರ ಪ್ರೀತಿಸುತ್ತಿದ್ದವರು ಎಲ್ಲಿದ್ದಾರೆ? ಇಂದು ನಾನು ಅವರಿಗೆ ನನ್ನ

ನೆರಳಲ್ಲಿ ಆಶ್ರಯ ನೀಡುವೆನು. ಇಂದು ನನ್ನ ನೆರಳಲ್ಲದೆ ಬೇರೆ ಯಾವ ನೆರಳೂ ಇರಲಾರದು." **(ಬುಖಾರಿ, ಮಾಲಿಕ್)**

24. ಅಲ್ಲಾಹನನ್ನು ಪ್ರೀತಿಸುವವನು ಬಹು ಜನಪ್ರಿಯನು

عَنْ أَبِىْ هُرَيْرَةَ رَضِىَ اللّٰهُ عَنْهُ ، قَالَ: قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : اِنَّ اللّٰهَ اِذَا أَحَبَّ عَبْدًا دَعَا جَبْرِيْلَ عَلَيْهِ السَّلَامُ فَقَالَ : " اِنِّىْ أُحِبُّ فُلَانًا فَأَحِبَّهُ. قَالَ : قَالَ فَيُحِبُّهُ جِبْرِيْلُ ، ثُمَّ يُنَادِىْ فِىْ السَّمَاءِ فَيَقُوْلُ : اِنَّ اللّٰهَ يُحِبُّ فُلَانًا فَأَحِبُّوْهُ فَيُحِبُّهُ أَهْلُ السَّمَاءِ. قَالَ : ثُمَّ يُوْضَعُ لَهُ الْقُبُوْلُ فِىْ الْأَرْضِ.

وَاِذَا أَبْغَضَ اللّٰهُ عَبْدًا ، دَعَا جِبْرِيْلَ ، فَيَقُوْلُ اِنِّىْ أُبْغِضُ فُلَانًا فَأَبْغِضْهُ فَيُبْغِضُهُ جِبْرِيْلُ ، ثُمَّ يُنَادِىْ فِىْ أَهْلِ السَّمَاءِ : اِنَّ اللّٰهَ يُبْغِضُ فُلَانًا ، فَأَبْغِضُوْهُ . قَالَ: فَيُبْغِضُوْنَهُ ، ثُمَّ تُوْضَعُ لَهُ الْبَغْضَاءُ فِىْ الْأَرْضِ."

رواه مسلم (و كذلك البخارى ومالك والترمذى)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಒಬ್ಬ ದಾಸನನ್ನು ಪ್ರೀತಿಸುತ್ತಾನೆಂದರೆ ಜಿಬ್ರೀಲ್(ಅ)ರನ್ನು ಕರೆದು, "ನಾನು ಇಂತಹ ದಾಸನನ್ನು ಪ್ರೀತಿಸುತ್ತೇನೆ. ನೀನೂ ಅವನನ್ನು ಪ್ರೀತಿಸು" ಎನ್ನುತ್ತಾನೆ. ಆಗ ಜಿಬ್ರೀಲರು ಆಕಾಶಲೋಕದಲ್ಲಿ ಘೋಷಿಸುತ್ತಾ, "ಅಲ್ಲಾಹನು ಇಂತಹ ದಾಸನನ್ನು ಪ್ರೀತಿಸುತ್ತಾನೆ. ನೀವೆಲ್ಲರೂ ಅವನನ್ನು ಪ್ರೀತಿಸಿರಿ" ಎನ್ನುತ್ತಾರೆ. ಆಗ ಆಕಾಶಲೋಕದವರೂ ಅವನನ್ನು ಪ್ರೀತಿಸತೊಡಗುತ್ತಾರೆ. ಪ್ರವಾದಿ(ಸ) ಹೇಳಿದರು, "ಹಾಗೆ ಅವನು ಈ ಲೋಕದಲ್ಲೂ ಜನಪ್ರಿಯನಾಗುತ್ತಾನೆ."

ಅಲ್ಲಾಹನು ಓರ್ವ ದಾಸನನ್ನು ದ್ವೇಷಿಸುವಾಗ, ಜಿಬ್ರೀಲರನ್ನು ಕರೆದು, "ನಾನು ಇಂತಹ ದಾಸನನ್ನು ದ್ವೇಷಿಸುತ್ತೇನೆ. ನೀನೂ ಅವನನ್ನು ದ್ವೇಷಿಸು" ಎನ್ನುತ್ತಾನೆ. ಆಗ ಜಿಬ್ರೀಲರು ಅವನನ್ನು ದ್ವೇಷಿಸತೊಡಗುತ್ತಾರೆ. ಅನಂತರ ಅವರು ಆಕಾಶಲೋಕದಲ್ಲೂ ಘೋಷಿಸುತ್ತಾ, "ಅಲ್ಲಾಹನು ಇಂತಹ ದಾಸನನ್ನು ದ್ವೇಷಿಸುತ್ತಾನೆ. ನೀವೆಲ್ಲರೂ ಅವನನ್ನು ದ್ವೇಷಿಸಿರಿ" ಎನ್ನುತ್ತಾರೆ. ಪ್ರವಾದಿ(ಸ) ಹೇಳಿದರು, "ಹಾಗೆ ಅವರೆಲ್ಲರೂ ಅವನನ್ನು ದ್ವೇಷಿಸತೊಡಗುತ್ತಾರೆ. ಅದರಿಂದಾಗಿ ಈ ಲೋಕದಲ್ಲೂ ಅವನನ್ನು ಎಲ್ಲೆಡೆ ದ್ವೇಷಿಸಲಾಗುತ್ತದೆ." **(ಮುಸ್ಲಿಮ್, ಬುಖಾರಿ, ಮಾಲಿಕ್, ತಿರ್ಮಿದಿ)**

25. ಅಲ್ಲಾಹನ ಆಪ್ತರನ್ನು ದ್ವೇಷಿಸುವವನ ವಿರುದ್ಧ ಯುದ್ಧ ಘೋಷಣೆ

عَنْ أَبِى هُرَيْرَةَ رَضِىَ اللّٰهُ عَنْهُ ، قَالَ: قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : اِنَّ اللّٰهَ عَزَّوَجَلَّ قَالَ : " مَنْ عَادٰى لِىْ وَلِيًّا ، فَقَدْ آذَنْتُهُ بِالْحَرْبِ ، وَمَا تَقَرَّبَ اِلَىَّ عَبْدِىْ بِشَيْءٍ أَحَبَّ اِلَىَّ مِمَّا أُفْتَرَضْتُ عَلَيْهِ - وَمَا يَزَالُ عَبْدِىْ يَتَقَرَّبُ اِلَىَّ بِالنَّوَافِلِ حَتّٰى أُحِبَّهُ فَاِذَا أَحْبَبْتُهُ ، كُنْتُ سَمْعَهُ الَّذِىْ يَسْمَعُ بِهِ ، وَبَصَرَهُ الَّذِىْ يُبْصِرُهُ بِهِ ، وَيَدَهُ الَّتِىْ يَبْطِشُ بِهَا ، وَرِجْلُهُ الَّتِىْ يَمْشِىْ بِهَا ، وَاِنْ سَأَلَنِىْ لَاُعْطِيَنَّهُ وَلَئِنِ اسْتَعَاذَنِىْ لَاُعِيْذَنَّهُ - وَمَا تَرَدَّدْتُ عَنْ شَيْءٍ أَنَا فَاعِلُهُ تَرَدُّدِىْ عَنْ نَفْسِىْ عَبْدِ الْمُؤْمِنُ يَكْرَهُ الْمَوْتَ وَأَنَا أَكْرَهُ مَسَاءَ تَهُ -" (رواه البخارى)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ಯಾರು ನನ್ನ ಮಿತ್ರನೊಂದಿಗೆ ವೈರ ಕಟ್ಟಿಕೊಳ್ಳುತ್ತಾನೋ,

ಅವರ ವಿರುದ್ಧ ನಾನು ಯುದ್ಧ ಘೋಷಿಸುತ್ತೇನೆ. ನನ್ನ ದಾಸನು ಕಡ್ಡಾಯ ಕರ್ಮಗಳ ಮೂಲಕ ನನಗೆ ನಿಕಟನಾಗುವಷ್ಟು ಬೇರಾವ ಕರ್ಮಗಳಿಂದಲೂ ಆಗುವುದಿಲ್ಲ. ನನ್ನ ದಾಸನು ನಫಿಲ್ (ಹೆಚ್ಚುವರಿ) ಕರ್ಮಗಳಿಂದಲೂ ನನಗೆ ನಿಕಟನಾಗುತ್ತಾ ಇರುತ್ತಾನೆ. ಆಗ ನಾನು ಅವನನ್ನು ಪ್ರೀತಿಸತೊಡಗುತ್ತೇನೆ. ಹಾಗೆ ಪ್ರೀತಿಸತೊಡಗುವಾಗ ನಾನು, ಅವನು ಆಲಿಸುವ ಕಿವಿಯಾಗುತ್ತೇನೆ. ಅವನು ಹಿಡಿಯುವ ಕೈಯಾಗುತ್ತೇನೆ. ಅವನು ನಡೆದಾಡುವ ಕಾಲಾಗುತ್ತೇನೆ. ಅವನು ನನ್ನಲ್ಲಿ ಬೇಡಿದರೆ, ಖಂಡಿತ ಅವನಿಗೆ ನೀಡುತ್ತೇನೆ. ಅವನು ನನ್ನಲ್ಲಿ ಅಭಯ ಯಾಚಿಸಿದರೆ, ಖಂಡಿತ ಅವನಿಗೆ ಅಭಯ ನೀಡುತ್ತೇನೆ. ನನ್ನ ವಿಶ್ವಾಸಿ ದಾಸನ ಪ್ರಾಣವನ್ನು ತೆಗೆಯುವಾಗ ನನಗಾಗುವಷ್ಟು ಸಂಕಟ ಬೇರಾವುದರಿಂದಲೂ ಆಗುವುದಿಲ್ಲ. ಅವನು ಮರಣವನ್ನು ಇಷ್ಟಪಡುವುದಿಲ್ಲ, ನಾನು ಅವನಿಗೆ ಕಷ್ಟ ಕೊಡಲೂ ಬಯಸುವುದಿಲ್ಲ." **(ಬುಖಾರಿ)**

26. ಈರ್ಷ್ಯೆಗೆ ಅರ್ಹ ಮಿತ್ರ

عَنْ أَبِىْ أُمامة رَضِىَ اللّٰهُ عَنْهُ، عَنِ النَّبِىِّ صَلَّى اللّٰهُ عَلَيْهِ وَسَلَّمَ، قَالَ: قَالَ اللّٰهُ عَزَّوَجَلَّ: "اِنَّ أَغْبَطَ أَوْلِيَائِىْ عِنْدِىْ لَمُؤْمِنٌ خَفِيْفُ الْحَاذِ، ذُوْ حَظٍّ مِنَ الصَّلَاةِ، أَحْسَنَ عِبَادَةَ رَبِّهِ، وَأَطَاعَهُ فِى السِّرِ، وَكَانَ غَامِضًا فِىْ النَّاسِ، لَا يُشَارُ اِلَيْهِ بِالْأَصَابِعِ وَكَانَ رِزْقُهُ كَفَافًا فَصَبَرَ عَلٰى ذٰلِكَ. ثُمَّ نَفَصَ بِيَدِهِ ثُمَّ قَالَ: عُجِّلَتْ مَنِيَّتُهُ، قَلَّتْ بِوَاكِيهِ قَلَّ تُرَاثُهُ." رواه الترمذى (وكذلك أحمد وابن ماجه وأسناده حسن)

ಅಬೂ ಉಮಾಮರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ನನ್ನ ಮಿತ್ರರ ಪೈಕಿ ಕಡಿಮೆ ಸೊತ್ತು-ಸಂತಾನ ಇರುವವನು, ನಮಾಝ್‌ನಿಂದ ಬಹಳಷ್ಟು ಪಾಲು ಪಡೆದವನು, ತನ್ನ ಪ್ರಭುವನ್ನು ಚೆನ್ನಾಗಿ ಇಬಾದತ್ ಮಾಡಿದವನು, ರಹಸ್ಯವಾಗಿಯೂ ಅವನ ಅನುಸರಣೆ ಮಾಡಿದವನು, ಜನರ ಮಧ್ಯೆ

ಅಜ್ಞಾತನಾಗಿದ್ದವನು, ಅವರಿಂದ ಬೆಟ್ಟು ಮಾಡಿಸಿಕೊಳ್ಳದವನು, ಜೀವನಾಧಾರ ಪರಿಮಿತವಾಗಿದ್ದರೂ ಅದರಲ್ಲಿ ಸಹನೆ ವಹಿಸಿದವನು ಈರ್ಷ್ಯೆಗೆ ಅರ್ಹನಾಗಿದ್ದಾನೆ." ತರುವಾಯ ಪ್ರವಾದಿ(ಸ) ಹೇಳಿದರು, "ಅವನಿಗೆ ಮರಣ ಬೇಗ ಬರುವುದು. ಅವನಿಗಾಗಿ ರೋದಿಸುವ ಸ್ತ್ರೀಯರಾರೂ ಇರಲಾರು. ಅವನ ವಾರೀಸಿನಲ್ಲಿ ಏನೂ ಇರಲಾರದು." (ಅಹ್ಮದ್, ಇಬ್ನು ಮಾಜಃ)

27. ಹುತಾತ್ಮನ ಸ್ಥಾನ

عَنْ مَسْرُوْقٍ قَالَ : سَأَلْنَا - أَوْسَأَلْتُ عَبْدَ اللّٰهِ (أَىُ ابْنَ مَسْعُوْدٍ) عَنْ هٰذِهِ الآيَةِ " وَلَا تَحْسَبَنَّ الَّذِيْنَ قُتِلُوْا فِىْ سَبِيْلِ اللّٰهِ أَمْوَاتًا بَلْ أَحْيَاءٌ عِنْدَ رَبِّهِمْ يُرْزَقُوْنَ " قَالَ اَمَا اَنَّاقَدْ سَأَلْنَا عَنْ ذٰلِكَ فَقَالَ : أَرْوَاحُهُمْ فِىْ جَوْفِ طَيْرٍ خُضْرٍ ، لَهَا قَنَادِيْلُ مُعَلَّقَةٌ بِالْعَرْشِ تَسْرَحُ مِنَ الْجَنَّةِ حَيْثُ شَاءَ تْ ، ثُمَّ تَأْوِىْ اِلٰى تِلْكَ الْقَنَادِيْلِ فَاطَّلَعَ اِلَيْهِمَ رَبُّهُمْ اِطِّلَاعَةً فَقَالَ : هَلْ تَشْتَهُوْنَ شَيْأً؟ قَالُوْا : أَىَّ شَيْئٍ نَشْتَهِى ، وَنَحْنُ نَسْرَحُ مِنَ الْجَنَّةِ حَيْثُ شِئْنَا ؟ فَفَعَلَ ذٰلِكَ بِهِمْ ثَلَاثَ مَرَّاتٍ ، فَلَمَّا رَأَوْا أَنَّهُمْ لَنْ يُتْرَكُوْا مِنْ أَنْ يُسْأَلُوْا ، قَالُوْا : يَارَبِّ ، نُرِيْدُ أَنْ تَرُدَّ أَرْوَاحَنَا فِىْ أَجْسَادِنَا ، حَتّٰى نُقْتَلَ فِىْ سَبِيْلِكَ مَرَّةً أُخْرَى ، فَلَمَّا رَأَى أَنْ لَيْسَ لَهُمْ حَاجَةٌ تُرِكُوْا ـ "

رواه مسلم (وكذلك الترمذى والنسائى وابن ماجه)

ಮಸ್ರೂಕ್ ಹೇಳುತ್ತಾರೆ: ನಾವು (ಅಥವಾ ನಾನು) ಅಬ್ದುಲ್ಲಾ (ಬಿನ್

ಮಸ್‌ಊದ್)ರೊಂದಿಗೆ 'ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಟ್ಟವರನ್ನು ಮೃತರೆನ್ನಬೇಡಿರಿ. ಅವರು ಯಥಾರ್ಥವಾಗಿ ಜೀವಂತವಿದ್ದಾರೆ. ತಮ್ಮ ಪ್ರಭುವಿನ ಬಳಿ ಅನ್ನಾಹಾರ ಪಡೆಯುತ್ತಿದ್ದಾರೆ' ಎಂಬ ಸೂಕ್ತದ ಬಗ್ಗೆ ಕೇಳಿದೆವು. ಅವರು ಹೇಳಿದರು: ನಾವು ಕೂಡ ಪ್ರವಾದಿಯವರೊಡನೆ(ಸ) ವಿಚಾರಿಸಿದ್ದೆವು. ಅವರು ಹೀಗೆ ಹೇಳಿದ್ದರು- ಅವರ ಆತ್ಮಗಳು ಹಸಿರು ಪಕ್ಷಿಗಳ ರೂಪದಲ್ಲಿರುವುವು. ಅವರಿಗಾಗಿ ಅರ್ಶ್‌ನಲ್ಲಿ(ದೇವಪೀಠದಲ್ಲಿ) ಕಂದೀಲುಗಳು ಉರಿಯುತ್ತಿರುತ್ತವೆ. ಅವರು ಸ್ವರ್ಗದಲ್ಲಿ ಎಲ್ಲಿಗೆ ಬೇಕಾದರೂ ತಿರುಗಾಡುತ್ತಾರೆ. ಅಲ್ಲಿಂದ ಬಂದು ಪುನಃ ಈ ಕಂದೀಲುಗಳಲ್ಲಿ ನೆಲೆಸು ತ್ತಾರೆ. ಅವರ ಪ್ರಭು ಅವರನ್ನು ನೋಡುತ್ತಾನೆ. "ನಿಮಗೇನಾದರೂ ಆಶೆಯಿದೆಯೇ?" ಎಂದು ಅವರೊಡನೆ ಕೇಳುತ್ತಾನೆ. ಅವರು ಹೇಳುತ್ತಾರೆ, "ನಮಗೆ ಇನ್ನೇನು ಬೇಕಾಗಿದೆ? ಸ್ವರ್ಗದಲ್ಲಿ ನಾವು ಬಯಸಿದಲ್ಲಿ ವಿಹರಿಸುತ್ತಿದ್ದೇವೆ." ಅಲ್ಲಾಹನು ಈ ಪ್ರಶ್ನೆಯನ್ನು ಮೂರು ಬಾರಿ ಆವರ್ತಿಸುತ್ತಾನೆ. ಆಗ ಅವರಿಗೆ ಈ ಪ್ರಶ್ನೆಯಿಂದ ಮುಕ್ತಿಯಿಲ್ಲವೆಂದು ತೋಚಿದಾಗ ಅವರು ಹೇಳುತ್ತಾರೆ, "ನಮ್ಮ ಪ್ರಭೂ! ನೀನು ನಮ್ಮ ಆತ್ಮಗಳನ್ನು ನಮ್ಮ ದೇಹಕ್ಕೆ ಜೋಡಿಸಬೇಕು ಮತ್ತು ನಮ್ಮನ್ನು ಭೂಲೋಕಕ್ಕೆ ಕಳುಹಿಸಬೇಕು, ಅಲ್ಲಿ ನಿನ್ನ ಮಾರ್ಗದಲ್ಲಿ ಹೋರಾಡಿ ಹುತಾತ್ಮರಾಗಬೇಕೆಂದು ನಾವು ಬಯಸುತ್ತೇವೆ." ಹಾಗೆ ಅವರಿಗೆ ಯಾವುದರ ಅಗತ್ಯವೂ ಇಲ್ಲವೆಂದು ಅಲ್ಲಾಹನು ಅರಿತಾಗ ಅವರನ್ನು ಅವರ ಪಾಡಿಗೆ ಬಿಟ್ಟು ಬಿಡುತ್ತಾನೆ. **(ಮುಸ್ಲಿಮ್, ತಿರ್ಮಿದಿ, ನಸಾಈ, ಇಬ್ನು ಮಾಜಃ)**

28. ಆತ್ಮಹತ್ಯೆ ಮಾಡಿಕೊಳ್ಳುವವನಿಗೆ ಸ್ವರ್ಗ ನಿಷಿದ್ಧ

عَنْ جُنْدُبِ بْنِ عَبْدِ اللّٰهِ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ:
كَانَ فِيْمَنْ كَانَ قَبْلَكُمْ رَجُلٌ، بِهِ جُرْحٌ فَجَزِعَ فَأَخَذَ سِكِّيْنًا، فَحَزَّبِهَا
يَدَهُ، فَمَارَقَأَ الدَّمُ حَتّٰى مَاتَ قَالَ اللّٰهُ تَعَالٰى: "بَادَرَنِىْ عَبْدِىْ بِنَفْسِهٖ،
حَرَّمْتُ عَلَيْهِ الْجَنَّةَ-" (رواه البخارى)

ಜುಂದುಬ್ ಬಿನ್ ಅಬ್ದುಲ್ಲಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ನಿಮಗಿಂತ ಮುಂಚಿನ ಸಮುದಾಯದಲ್ಲಿ ಓರ್ವ ಘಾಸಿಗೊಂಡು ತೀವ್ರ

ನೋವಿನಿಂದ ನರಳುತ್ತಿದ್ದನು. ಅವನು ಚೂರಿ ತೆಗೆದು ತನ್ನ ಕೈಯನ್ನು ಗಾಯಗೊಳಿಸಿದನು. ಅದರಿಂದ ನಿರಂತರ ರಕ್ತ ಹರಿದು, ಆದರಿಂದಾಗಿ ಅವನು ಮರಣ ಹೊಂದಿದನು. ಅಲ್ಲಾಹನು (ಅವನನ್ನು ನೋಡಿ) ಹೇಳಿದನು, "ನನ್ನ ದಾಸನು ತನ್ನ ಪ್ರಾಣ ತೆಗೆಯುವಲ್ಲಿ ಆತುರ ಪಟ್ಟನು. ನಾನು ಅವನಿಗೆ ಸ್ವರ್ಗವನ್ನು ನಿಷೇಧಿಸಿದ್ದೇನೆ." **(ಬುಖಾರಿ)**

29. ತಾಳ್ಮೆಯ ಪ್ರತಿಫಲ ಸ್ವರ್ಗವಾಗಿದೆ

عَنْ أَبِیْ هُرَيْرَةَ رَضِیَ اللّٰهُ عَنْهُ ، أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ: يَقُوْلُ اللّٰهُ تَعَالٰی : "مَا لِعَبْدِیْ الْمُؤْمِنِ عِنْدِیْ جَزَاءٌ اِذَا قَبَضْتُ صَفِيَّهُ مِنْ أَهْلِ الدُّنْيَا ، ثُمَّ احْتَسَبَهُ اِلَّا الْجَنَّةُ-" (رواه البخاری)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ನನ್ನೊಬ್ಬ ದಾಸನ ಅತಿ ಆಪ್ತನನ್ನು ನಾನು ಈ ಲೋಕದಿಂದ ಎತ್ತಿಕೊಂಡಾಗ, ಆದಕ್ಕಾಗಿ ಅವನು ತಾಳ್ಮೆ ವಹಿಸಿಕೊಂಡರೆ, ಆದಕ್ಕೆ ಪ್ರತಿಯಾಗಿ ನನ್ನ ಬಳಿ ಅವನಿಗೆ ಸ್ವರ್ಗಕ್ಕಿಂತ ಕಡಿಮೆಯ ಪ್ರತಿಫಲವಿಲ್ಲ." **(ಬುಖಾರಿ)**

30. ಅಲ್ಲಾಹನ ಭೇಟಿ ಬಯಸುವವನು

عَنْ أَبِیْ هُرَيْرَةَ رَضِیَ اللّٰهُ عَنْهُ ، أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ قَالَ : قَالَ اللّٰهُ عَزَّوَجَلَّ : "اِذَا أَحَبَّ عَبْدِیْ لِقَائِیْ ، أَحْبَبْتُ لِقَاءَهُ ، وَاِذَا كَرِهَ لِقَائِیْ ، كَرِهْتُ لِقَاءَهُ-" (رواه البخاری ومالك)

(وفی رواية لمسلم , توضح معنی الحديث)

عَنْ عَائِشَةَ رَضِیَ اللّٰهُ عَنْهَا ، قَالَتْ: قَالَ رَسُوْلُ اللّٰهِ ﷺ : "مَنْ

أَحَبَّ لِقَاءَ اللهِ، أَحَبَّ اللهُ لِقَاءَهُ، وَمَنْ كَرِهَ لِقَاءَ اللهِ، كَرِهَ اللهُ لِقَاءَهُ - فَقُلْتُ: يَا نَبِيَّ اللهِ، أَكَرَاهِيَةَ الْمَوْتَ؟ فَكُلُّنَا نَكْرَهُ الْمَوْتَ - قَالَ لَيْسَ كَذَلِكَ، وَلَكِنَّ الْمُؤْمِنَ إِذَا بُشِّرَ بِرَحْمَةِ اللهِ وَرِضْوَانِهِ وَجَنَّتِهِ، أَحَبَّ لِقَاءَ اللهِ، فَأَحَبَّ اللهُ لِقَاءَهُ، وَإِنَّ الْكَافِرَ إِذَا بُشِّرَ بِعَذَابِ اللهِ وَسَخَطِهِ، كَرِهَ لِقَاءَ اللهِ، وَكَرِهَ اللهُ لِقَاءَهُ -"

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹ್ ಹೇಳುತ್ತಾನೆ, "ನನ್ನ ದಾಸನು ನನ್ನನ್ನು ಭೇಟಿಯಾಗಲು ಬಯಸುವಾಗ ನಾನೂ ಅವನನ್ನು ಭೇಟಿಯಾಗಲು ಬಯಸುತ್ತೇನೆ. ದಾಸನು ನನ್ನನ್ನು ಭೇಟಿಯಾಗಲು ಇಷ್ಟಪಡದೆ ಇರುವಾಗ ನಾನೂ ಅವನನ್ನು ಭೇಟಿಯಾಗಲು ಇಚ್ಚಿಸುವುದಿಲ್ಲ."

(ಬುಖಾರಿ, ಮಾಲಿಕ್)

ಮುಸ್ಲಿಮ್‌ನಲ್ಲಿ ಈ ಹದೀಸ್‌ನ ಅರ್ಥ-ತಾತ್ಪರ್ಯಗಳನ್ನೂ ಸ್ಪಷ್ಟಪಡಿಸಲಾಗಿದೆ. ಆದರೆ ಅದರಲ್ಲಿ ಸನದು ಅಲ್ಲಾಹನ ಕಡೆಯಿಂದಾಗಿರಲಿಲ್ಲ.

ಆಯಿಶಾ ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಯಾರು ಅಲ್ಲಾಹನನ್ನು ಭೇಟಿಯಾಗಲು ಬಯಸುತ್ತಾನೋ ಅಲ್ಲಾಹನೂ ಅವನನ್ನು ಭೇಟಿಯಾಗಲು ಇಚ್ಚಿಸುತ್ತಾನೆ. ಇನ್ನು ಯಾರು ಅಲ್ಲಾಹನನ್ನು ಭೇಟಿಯಾಗಲು ಇಷ್ಟಪಡುವುದಿಲ್ಲವೋ ಅಲ್ಲಾಹನೂ ಅವನನ್ನು ಭೇಟಿಯಾಗಲು ಇಷ್ಟಪಡುವುದಿಲ್ಲ." ಇದನ್ನು ಕೇಳಿ ನಾನು ಕೇಳಿದೆ, "ಅಲ್ಲಾಹನ ಸಂದೇಶವಾಹಕರೇ(ಸ)! ಅವನು ಮರಣವನ್ನು ಬಯಸುವುದಿಲ್ಲವೆಂದು ಇದರ ಅರ್ಥವೇ?" ಪ್ರವಾದಿ(ಸ) ಹೇಳಿದರು, "ಅಲ್ಲ, ಹಾಗಲ್ಲ, ವಿಶ್ವಾಸಿಗೆ ಅಲ್ಲಾಹನ ಕರುಣೆ, ಸಂಪ್ರೀತಿ ಮತ್ತು ಸ್ವರ್ಗದ ಸುವಾರ್ತೆಯನ್ನು ನೀಡಲಾದಾಗ ಅವನು ಅಲ್ಲಾಹನನ್ನು ಭೇಟಿಯಾಗಲು ಬಯಸುತ್ತಾನೆ. ಅವಿಶ್ವಾಸಿಗೆ ಅಲ್ಲಾಹನ ಶಿಕ್ಷೆ ಮತ್ತು ಕೋಪದ ಬಗ್ಗೆ ತಿಳಿಸಲಾದಾಗ ಅವನು ಅಲ್ಲಾಹನನ್ನು ಭೇಟಿಯಾಗಲು ಬಯಸದೆ ದೂರ ಓಡುತ್ತಾನೆ. ಆಗ ಅಲ್ಲಾಹನೂ ಅವನನ್ನು ಭೇಟಿ ಮಾಡಲು ಇಷ್ಟಪಡುವುದಿಲ್ಲ."

(ಈ ಹದೀಸ್ ಇದೇ ರೂಪದಲ್ಲಿ ತಿರ್ಮಿದಿ ಮತ್ತು ನಸಾಈಯಲ್ಲೂ ಬಂದಿದೆ.)

31. ಕ್ಷಮಿಸುವುದು ಕೇವಲ ಅಲ್ಲಾಹನ ಅಧಿಕಾರವಾಗಿದೆ

عَنْ جُنْدَبٍ رَضِيَ اللّٰهُ عَنْهُ أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ: حَدَّثَ "أَنَّ رجُلًا قَالَ: وَاللّٰهِ لَا يَغْفِرُ اللّٰهُ لِفُلَانٍ، وَإِنَّ اللّٰهَ تَعَالٰى قَالَ: مَنْ ذَا الَّذِىْ يَتَأَلّٰى عَلَيَّ أَنْ لَّا أَغْفِرَ لِفُلَانٍ فَإِنِّىْ قَدْ غَفَرْتُ لِفُلَانٍ، وَأَحْبَطْتُ عَمَلَكَ أَوْ كَمَا قَالَ-" (رواه مسلم)

ಜುಂದುಬ್‌ರಿಂದ ವರದಿ. ಪ್ರವಾದಿ(ಸ) ಹೇಳಿದರು:

ಒಬ್ಬ ವ್ಯಕ್ತಿ ಅಲ್ಲಾಹನ ಆಣೆ ಹಾಕುತ್ತಾ, "ಅಲ್ಲಾಹನು ಇಂತಹ ವ್ಯಕ್ತಿಯನ್ನು ಕ್ಷಮಿಸಲಾರನು" ಎಂದು ಹೇಳಿದನು. ಇದನ್ನು ಕೇಳಿ ಅಲ್ಲಾಹ್ ಹೇಳಿದನು, "ಯಾರದು, ನನ್ನ ಆಣೆ ಹಾಕಿ, ನಾನು ಇಂತಹ ವ್ಯಕ್ತಿಯನ್ನು ಕ್ಷಮಿಸಲಾರೆನೆಂದು ಹೇಳಿದವನು? ತಿಳಿದಿರಲಿ! ನಾನು ಆ ವ್ಯಕ್ತಿಯನ್ನು ಕ್ಷಮಿಸಿದೆ ಮತ್ತು ನಿನ್ನ ಕರ್ಮವನ್ನು ವ್ಯರ್ಥಗೊಳಿಸಿದೆ." (ಮುಸ್ಲಿಮ್)

32. ಅಲ್ಲಾಹನನ್ನು ಬಹಳ ಭಯಪಡುವವನ ಪ್ರತಿಫಲ

عَنْ أَبِىْ هُرَيْرَةَ رَضِيَ اللّٰهُ عَنْهُ، عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ: "اَسْرَفَ رَجُلٌ عَلٰى نَفْسِهِ، فَلَمَّا حَضَرَهُ الْمَوْتُ اَوْصٰى بَنِيْهِ، فَقَالَ: اِذَا اَنَا مِتُّ فَاحْرِقُوْنِىْ، ثُمَّ اسْحَقُوْنِىْ، ثُمَّ اَذْرُوْنِىْ فِى الرِّيْحِ فِى الْبَحْرِ، فَوَاللّٰهِ لَئِنْ قَدَرَ عَلٰى رَبِّىْ لَيُعَذِّبَنِىْ عَذَابًا مَا عَذَّبَهُ بِهِ اَحَدًا قَالَ، فَفَعَلُوْا ذٰلِكَ بِهِ، فَقَالَ لِلْاَرْضِ اَدِّىْ مَا اَخَذْتِ، فَاِذَا هُوَ قَائِمٌ، فَقَالَ لَهُ: مَا حَمَلَكَ عَلٰى مَا صَنَعْتَ؟ قَالَ: خَشْيَتُكَ يَارَبِّ،

أَوْ مَخَافَتُكَ، فَغَفَرَ لَهُ بِذٰلِكَ۔" رواه مسلم

(وكذلك البخارى والنسائى وابن ماجه)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಒಬ್ಬ ವ್ಯಕ್ತಿ ತನ್ನ ಮೇಲೆ ತಾನೇ ಅಕ್ರಮವೆಸಗಿದ್ದ. (ಅಂದರೆ ತನ್ನ ಬದುಕನ್ನು ಅಪರಾಧಗಳಲ್ಲೇ ಕಳೆದಿದ್ದ.) ಅವನ ಮರಣ ಸಮೀಪಿಸಿದಾಗ ತನ್ನ ಪುತ್ರರನ್ನು ಕರೆದು, "ನಾನು ಸತ್ತರೆ ನನ್ನನ್ನು ಸುಟ್ಟು ಅದರ ಬೂದಿಯನ್ನು ಸಮುದ್ರದಲ್ಲಿ ತೇಲಿಬಿಡಬೇಕು. ಏಕೆಂದರೆ ಅಲ್ಲಾಹನು ನನ್ನನ್ನು ಹಿಡಿದು ಬಿಟ್ಟರೆ, ನನಗೆ ಕಠಿಣ ಶಿಕ್ಷೆ ನೀಡುವನು" ಎಂದು ಉಪದೇಶಿಸಿದನು. ಅವನ ಪುತ್ರರು ಹಾಗೆಯೇ ಮಾಡಿದರು. ಅಲ್ಲಾಹನು ಭೂಮಿಗೆ, "ನೀನು ಪಡೆದಿರುವುದನ್ನು ಮರಳಿಸು" ಎಂದು ಆಜ್ಞಾಪಿಸಿದನು. ನೋಡನೋಡುತ್ತಿದ್ದಂತೆಯೇ ಆ ವ್ಯಕ್ತಿ ತನ್ನ ನಿಜರೂಪದಲ್ಲಿ ಪ್ರತ್ಯಕ್ಷನಾದನು. ಅಲ್ಲಾಹನು ಕೇಳಿದನು, "ನೀನೇಕೆ ಹಾಗೆ ಮಾಡಿದೆ?" ಅವನು ಹೇಳಿದ, "ನನ್ನ ಪ್ರಭೂ! ನಿನಗೆ ಹೆದರಿ!" ಇದನ್ನು ಕೇಳಿ ಅಲ್ಲಾಹನು ಅವನನ್ನು ಕ್ಷಮಿಸಿದನು.

(ಬುಖಾರಿ, ನಸಾಈ, ಇಬ್ನುಮಾಜಃ)

33. ತೌಬಾ ಮಾಡುವವನನ್ನು ಅಲ್ಲಾಹ್ ಕ್ಷಮಿಸುತ್ತಾನೆ

عَنْ أَبِى هُرَيْرَةَ رَضِىَ اللّٰهُ عَنْهُ عَنِ النَّبِىِّ صَلَّى اللّٰهُ عَلَيْهِ وَسَلَّمَ، فِيْمَا يَحْكِىْ عَنْ رَبِّهِ عَزَّوَجَلَّ قَالَ: اَذْنَبَ عَبْدٌ ذَنْبًا، فَقَالَ: اَللّٰهُمَّ اغْفِرْلِىْ ذَنْبِىْ، فَقَالَ تَبَارَكَ وَتَعَالٰى: "اَذْنَبَ عَبْدِىْ ذَنْبًا، فَعَلِمَ اَنَّ لَهُ رَبًّا، يَغْفِرُ الذَّنْبَ وَيَأْخُذُ بِهِ، ثُمَّ عَادَ فَأَذْنَبَ، فَقَالَ تَبَارَكَ وَتَعَالٰى: عَبْدِىْ أَذْنَبَ ذَنْبًا۔ فَعَلِمَ أَنَّ لَهُ رَبًّا، يَغْفِرُ الذَّنْبَ وَيَأْخُذُ بِهِ، ثُمَّ عَادَ فَأَذْنَبَ، فَقَالَ: أَىْ رَبِّ اغْفِرْلِىْ ذَنْبِىْ، فَقَالَ تَبَارَكَ وَتَعَالٰى: أَذْنَبَ عَبْدِىْ ذنباً۔ فَعَلِمَ أَنَّ لَهُ رَبًّا، يَغْفِرُ الذَّنْبَ، وَيَأْخُذُ بِالذَّنْبِ،

اِعْمَلْ مَا شِئْتَ ، فَقَدْ غَفَرْتُ لَكَ -"

رواه مسلم (و كذلك البخارى)

ಅಬೂಹುರೈರಾರಿಂದ ವರದಿ. ಪ್ರವಾದಿಯವರು(ಸ) ಅಲ್ಲಾಹನ ಮಾತಿನಲ್ಲಿ ಹೀಗೆ ಹೇಳಿದರು:

ನನ್ನ ಒಬ್ಬ ದಾಸನು ಪಾಪ ಮಾಡಿದನು. (ಅದರಿಂದ ಅವನಿಗೆ ಪಶ್ಚಾತ್ತಾಪವುಂಟಾಯಿತು.) ಅವನು ಹೇಳಿದನು, "ಓ ಅಲ್ಲಾಹ್! ನನ್ನ ಪಾಪವನ್ನು ಮನ್ನಿಸು." ಅಲ್ಲಾಹನು ಹೇಳಿದನು, "ನನ್ನ ದಾಸನು ಪಾಪ ಮಾಡಿದನು. ಅವನಿಗೊಬ್ಬ ಪ್ರಭುವಿದ್ದಾನೆ, ಅವನು ಪಾಪಗಳನ್ನು ಮನ್ನಿಸುತ್ತಾನೆ, ಅದಕ್ಕಾಗಿ ಹಿಡಿಯುತ್ತಲೂ ಇದ್ದಾನೆ ಎಂದು ಅವನಿಗೆ ತಿಳಿದಿದೆ." ಅವನು ಪುನಃ ಪಾಪ ಮಾಡಿದನು. (ಬಳಿಕ ಪಶ್ಚಾತ್ತಾಪ ಪಟ್ಟನು). ಅವನು ಹೇಳಿದನು, "ನನ್ನ ಪ್ರಭೂ! ನನ್ನ ಪಾಪವನ್ನು ಕ್ಷಮಿಸು." ಅಲ್ಲಾಹನು ಹೇಳಿದನು, "ನನ್ನ ದಾಸನು ಪಾಪ ಮಾಡಿದನು. ಅವನಿಗೊಬ್ಬ ಪ್ರಭು ಇದ್ದಾನೆ, ಅವನು ಪಾಪಗಳನ್ನು ಕ್ಷಮಿಸುತ್ತಾನೆ, ಅದಕ್ಕಾಗಿ ಹಿಡಿಯುತ್ತಲೂ ಇದ್ದಾನೆಂದು ಅವನಿಗೆ ತಿಳಿದಿದೆ." ಮಗುದೊಮ್ಮೆ ಅವನು ಪಾಪ ಮಾಡಿದನು. (ಅದರಿಂದ ಲಜ್ಜಿತನಾಗಿ) ಅವನು ಹೇಳಿದನು, "ಓ ಅಲ್ಲಾಹ್! ನನ್ನ ಪಾಪವನ್ನು ಮನ್ನಿಸು." ಅಲ್ಲಾಹನು ಹೇಳಿದನು, "ನನ್ನ ದಾಸನು ಪುನಃ ಪಾಪ ಮಾಡಿದನು. ಅವನಿಗೊಬ್ಬ ಪ್ರಭು ಇದ್ದಾನೆ, ಅವನು ಪಾಪಗಳನ್ನು ಮನ್ನಿಸುತ್ತಾನೆ, ಅದಕ್ಕಾಗಿ ಅವನನ್ನು ಹಿಡಿಯುತ್ತಲೂ ಇದ್ದಾನೆಂದು ಅವನಿಗೆ ತಿಳಿದಿದೆ." (ಆ ದಾಸನು ಪದೇ ಪದೇ ಪಶ್ಚಾತ್ತಾಪ ಪಟ್ಟು ಮರಳುವ ರೀತಿಯು ಅಲ್ಲಾಹನಿಗೆ ಬಹಳ ಇಷ್ಟವಾಯಿತು). ಹಾಗಾಗಿ, "ನಿನ್ನಿಷ್ಟದಂತೆ ಮಾಡು. ನಾನು ನಿನ್ನನ್ನು ಕ್ಷಮಿಸಿದೆ" ಎಂದು ಹೇಳಿದನು.

(ಮುಸ್ಲಿಮ್, ಬುಖಾರಿ)

34. ಪಾಪಿಯು ಅಲ್ಲಾಹನ ಬಗ್ಗೆ ನಿರಾಶನಾಗಬಾರದು

عَنْ اَنَسٍ رَضِيَ اللّٰهُ عَنْهُ ، قَالَ : سَمِعْتُ رَسُوْلَ اللّٰهِ صَلَّى اللّٰهُ عَلَيْهِ وَسَلَّمَ يَقُوْلُ : قَالَ اللّٰهُ عَزَّوَجَلَّ : " يَا ابْنَ آدَمَ ، اِنَّكَ مَا دَعَوْتَنِىْ وَ رَجَوْتَنِىْ غَفَرْتُ لَكَ عَلٰى مَا كَانَ مِنْكَ وَلَا اُبَالِىْ يَا ابْنَ آدَمَ :

لَـوْ بَلَغَتْ ذُنُوبُكَ عَنَانَ السَّمَاءِ ثُمَّ اسْتَغْفَرْتَنِي ، غَـفَـرْتُ لَكَ ـ يَـا ابْـنَ آدَمَ : إِنَّكَ لَوْ أَتَيْتَنِي بِقُرَابِ الْأَرْضِ خَطَايَا ثُمَّ لَقِيْتَنِي لَا تُشْرِكُ بِي شَيْئًا ، لَأَتَيْتُكَ بِقُرَابِهَا مَغْفِرَةً ـ"

رواه الترمذى (وكذلك أحمد وسنده حسن)

ಅನಸ್‌ರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಹೇಳುತ್ತಾನೆ, "ಓ ಆದಮನ ಪುತ್ರಾ (ಮಾನವಾ)! ನೀನು ನನ್ನನ್ನು ಪ್ರಾರ್ಥಿಸಿದಾಗಲೆಲ್ಲ ಮತ್ತು ನನ್ನಿಂದ ಕ್ಷಮೆ ಯಾಚಿಸಿದಾಗಲೆಲ್ಲ ನಾನು ನಿನ್ನ ಪಾಪಗಳನ್ನು ಮನ್ನಿಸುತ್ತಿರುವೆನು. ನನಗೆ ಅದರ ಚಿಂತೆ ಇರಲಾರದು. ಆದಮನ ಪುತ್ರಾ! ನಿನ್ನ ಪಾಪಗಳು ಆಕಾಶದೆತ್ತರದಷ್ಟಿದ್ದರೂ ನೀನು ನನ್ನಲ್ಲಿ ಕ್ಷಮೆ ಯಾಚಿಸಿದರೆ, ನಾನು ನಿನ್ನನ್ನು ಕ್ಷಮಿಸುವೆನು. ಆದಮನ ಪುತ್ರಾ! ನೀನು ಭೂಮಿಯ ವಿಶಾಲತೆಯಷ್ಟು ಪಾಪಗಳೊಂದಿಗೆ ನನ್ನ ಬಳಿಗೆ ಬಂದರೂ ನನ್ನೊಂದಿಗೆ ಯಾರನ್ನೂ ಭಾಗಿಗೊಳಿಸದ ಸ್ಥಿತಿಯಲ್ಲಿ ನೀನು ನನ್ನ ಬಳಿಗೆ ಬಂದರೆ, ನಾನೂ ಭೂಮಿಯ ವಿಶಾಲತೆಯಷ್ಟೇ ಕ್ಷಮೆಯೊಂದಿಗೆ ನಿನ್ನ ಬಳಿಗೆ ಬರುವೆನು." **(ತಿರ್ಮಿದಿ, ಅಹ್ಮದ್-ಹಸನ್)**

35. ಬೇಡುವವನಿಗೆ ನೀಡಲಾಗುವುದು

عَنْ اَبِيْ هُرَيْرَةَ رَضِيَ اللّٰهُ عَنْهُ ، اَنَّ رَسُوْلُ اللّٰهِ صَلَّى اللّٰهُ عَلَيْهِ وَسَلَّمَ قَالَ : " يَتَنَزَّلُ رَبُّـنَـا تَبَارَكَ وَتَعَالٰى ، كُلَّ لَيْلَةٍ اِلٰى سَمَاءِ الدُّنْيَا ، حِيْنَ يَبْقٰى ثُلُثُ اللَّيْلِ الآخِرُ ، فَيَـقُـوْلُ: مَـنْ يَـدْعُـوْنِـيْ فَـأَسْتَجِيْبَ لَهُ ؟ مَنْ يَسْأَلُنِيْ فَأُعْطِيَهُ مَنْ يَسْتَغْفِرُنِيْ فَاَغْفِرُلَهُ ؟ ـ"

رواه البـخـارى (وكـذلك مسلم ومالك والترمذى وأبوداؤد)

وفى رواية لمسلم زيادة : " فَلَا يَزَالُ كَذَلِكَ حَتَّى يُضِئَ الْفَجْرُ ـ"

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ರಾತ್ರಿಯ ಅಂತಿಮ ಜಾವದಲ್ಲಿ ಹತ್ತಿರದ ಆಕಾಶಕ್ಕೆ ಇಳಿದು ಬರುತ್ತಾನೆ ಮತ್ತು ಹೀಗೆ ಹೇಳುತ್ತಾನೆ; "ಯಾರಿದ್ದಾನೆ ನನ್ನನ್ನು ಕೂಗಿ ಕರೆಯುವವನು? ನಾನವನ ಕೂಗನ್ನು ಆಲಿಸುತ್ತೇನೆ. ಯಾರಿದ್ದಾನೆ ನನ್ನೊಂದಿಗೆ ಬೇಡುವವನು? ನಾನವನಿಗೆ ನೀಡುತ್ತೇನೆ. ಯಾರಿದ್ದಾನೆ ನನ್ನಲ್ಲಿ ಕ್ಷಮೆ ಯಾಚಿಸುವವನು? ನಾನವನನ್ನು ಕ್ಷಮಿಸುತ್ತೇನೆ."

(ಬುಖಾರಿ, ಮುಸ್ಲಿಮ್, ಮಾಲಿಕ್, ತಿರ್ಮಿದಿ, ಅಬೂದಾವೂದ್)

'ಮುಸ್ಲಿಮ್'ನ ಒಂದು ಹದೀಸ್‌ನಲ್ಲಿ ಹೆಚ್ಚುವರಿಯಾಗಿ ಹೀಗಿದೆ:

"ಬೆಳಕು ಹರಿಯುವ ವರೆಗೂ ಅಲ್ಲಾಹನು ಈ ರೀತಿ ಕರೆ ಕೊಡುತ್ತಲೇ ಇರುತ್ತಾನೆ."

36. ನಿರ್ಣಾಯಕ ದಿನದಂದು ಪ್ರವಾದಿ ಮುಹಮ್ಮದ್(ಸ)ರ ಶಿಫಾರಸ್ಸು

عَنْ اَنَسٍ رَضِيَ اللّٰهُ عَنْهُ ، عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ : " يَجْتَمِعُ الْمُؤْمِنُوْنَ يَوْمَ الْقِيَامَةِ فَيَقُوْلُوْنَ : لَوِ اسْتَشْفَعْنَا اِلٰى رَبِّنَا ، فَيَأْتُوْنَ آدَمَ ، فَيَقُوْلُوْنَ : أَنْتَ أَبُوالنَّاسِ ، خَلَقَكَ اللّٰهُ بِيَدِهٖ ، وَاَسْجَدَ لَكَ مَلاَئِكَتَهُ ، وَعَلَّمَكَ اَسْمَاءَ كُلِّ شَيْءٍ فَاشْفَعْ لَنَا عِنْدَ رَبِّكَ ، حَتّٰى يُرِيْحَنَا مِنْ مَكَانِنَا هٰذَا ، فَيَقُوْلُ : لَسْتُ هُنَاكُمْ ، وَيَذْكُرُ ذَنْبَهُ ، فَيَسْتَحْيِيْ : أْتُوْا نُوْحًا فَاِنَّهُ اَوَّلُ رَسُوْلٍ بَعَثَهُ اللّٰهُ اِلٰى أَهْلِ الْأَرْضِ ، فَيَأْتُوْنَهُ فَيَقُوْلُ : لَسْتُ هُنَاكُمْ , وَيَذْكُرُ سُؤَالَهُ رَبَّهُ مَا لَيْسَ لَهُ بِهٖ عِلْمٌ فَيَسْتَحْيِيْ فَيَقُوْلُ : ائْتُوْا خَلِيْلَ الرَّحْمٰنِ فَيَأْتُوْنَهُ ، فَيَقُوْلُهُ لَسْتُ هُنَاكُمْ ، أْتُوْا مُوْسٰى ، عَبْدًا كَلَّمَهُ اللّٰهُ وَأَعْطَاهُ التَّوْرَاةَ - فَيَأْتُوْنَهُ ،

فَيَقُوْلُ: لَسْتُ هُنَاكُمْ - وَيَذْكُرُ قَتَلَ النَّفْسِ بِغَيْرِ نَفْسٍ فَيَسْتَحْيِيْ مِنْ رَبِّهِ - فَيَقُوْلُ: اُئْتُوْا عِيْسٰى عَبْدَ اللّٰهِ وَرَسُوْلَهُ، وَكَلِمَةَ اللّٰهِ وَرُوْحَهُ- فَيَأْتُوْنَهُ، فَيَقُوْلُ لَسْتُ هُنَاكُمْ، اُئْتُوْا مُحَمَّدًا ﷺ، عَبْدًا غَفَرَ اللّٰهُ لَهُ مَا تَقَدَّمَ مِنْ ذَنْبِهِ وَمَا تَأَخَّرَ- فَيَأْتُوْنِيْ، فَأَنْطَلِقَ حَتّٰى أَسْتَاذِنَ عَلٰى رَبِّيْ فَيُؤْذَنُ- فَإِذَا رَأَيْتُ رَبِّيْ وَقَعْتُ، سَاجِدًا، فَيَدَعُنِيْ مَاشَاءَ اللّٰهُ، ثُمَّ يُقَالُ: ارْفَعْ رَأْسَكَ وَسَلْ تُعْطَهُ، وَقُلْ يُسْمَعْ، وَأَشْفَعْ تُشَفَّعْ، فَأَرْفَعُ رَأْسِيْ فَأَحْمَدُهُ تَحْمِيْدٍ يُعَلِّمُنِيْهِ ثُمَّ اشْفَعُ فَيَحُدُّ لِيْ حَدًّا، فَأُدْخِلُهُمُ الْجَنَّةَ، ثُمَّ أَعُوْدُ إِلَيْهِ، فَإِذَا رَأَيْتُ رَبِّيْ (فَأَقَعُ سَاجِدًا) مِثْلَهُ ثُمَّ أَشْفَعُ فَيَحُدُّ لِيْ حَدًّا، فَأُدْخِلُهُمُ الْجَنَّةَ ثُمَّ أَعُوْدُ الثَّالِثَةَ، ثُمَّ أَعُوْدُ الرَّابِعَةَ، فَأَقُوْلُ: مَا بَقِيَ فِي النَّارِ اِلَّا مَنْ حَبَسَهُ الْقُرْآنُ، وَوَجَبَ عَلَيْهِ الْخُلُوْدُ-"

رواه البخاری (وكذلك مسلم والترمذی وابن ماجه)

وفی رواية آخر للبخاری زيادة هی :

قَالَ النَّبِيُّ صَلَّى اللّٰهُ عَلَيْهِ وَسَلَّمَ: يَخْرُجُ مِنَ النَّارِ مَنْ قَالَ لَا اِلٰهَ اِلَّا اللّٰهُ، وَكَانَ فِيْ قَلْبِهِ مِنَ الْخَيْرِ مَا يَزِنُ شَعِيْرَةً، ثُمَّ يَخْرُجُ مِنَ النَّارِ مَنْ قَالَ لَا اِلٰهَ اللّٰهُ وَكَانَ فِيْ قَلْبِهِ مِنَ الْخَيْرِ مَا يَزِنُ بُرَّةً، ثُمَّ يَخْرُجُ مِنَ النَّارِ مَنْ قَالَ لَا اِلٰهَ اِلَّا اللّٰهُ، وَكَانَ فِيْ قَلْبِهِ مَا يَزِنُ مِنَ الْخَيْرِ ذَرَّةً-"

ಅನಸ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

ನಿರ್ಣಾಯಕ ದಿನದಂದು ವಿಶ್ವಾಸಿಗಳೆಲ್ಲರೂ ಒಟ್ಟು ಸೇರಿ, "ನಾವು ನಮ್ಮ ಪ್ರಭುವಿನ ಬಳಿ ಯಾರಿಂದಲಾದರೂ ಶಿಫಾರಸ್ಸು ಮಾಡಿಸಿಕೊಳ್ಳೋಣ" ಎಂದು ಹೇಳುವರು. ಹಾಗೆ ಅವರೆಲ್ಲ ಆದಿಪಿತ ಆದಮ್(ಅ)ರವರ ಬಳಿಗೆ ಹೋಗಿ ಹೇಳುವರು,

"ತಾವು ಮಾನವರೆಲ್ಲರ ತಂದೆಯಾಗಿದ್ದೀರಿ. ಅಲ್ಲಾಹನು ತಮ್ಮನ್ನು ತನ್ನ ಕೈಯಾರೆ ಮಾಡಿರುವನು. ದೇವಚರರಿಂದ ತಮ್ಮ ಮುಂದೆ ಸಾಷ್ಟಾಂಗವೆರಗುವಂತೆ ಆಜ್ಞಾಪಿಸಿದನು. ತಮಗೆ ಎಲ್ಲ ವಸ್ತುಗಳ ಜ್ಞಾನ ದಯಪಾಲಿಸಿದನು. ನಮಗೆ ಈ ಸ್ಥಳದಿಂದ (ಹಶ್ರ್) ಮುಕ್ತಿ ನೀಡುವಂತೆ ತಮ್ಮ ಪ್ರಭುವಿನೊಂದಿಗೆ ಶಿಫಾರಸ್ಸು ಮಾಡುವಿರಾ?"

ಆದಮ್(ಅ) ಹೇಳುವರು, "ಇಲ್ಲ, ನಾನು ನಿಮಗಾಗಿ ಏನೂ ಮಾಡಲಾರೆ." ಅವರು ತಮ್ಮ ತಪ್ಪನ್ನು ಪ್ರಸ್ತಾಪಿಸುವರು. ಅವರಿಗೆ ದಾಕ್ಷಿಣ್ಯವಾಗುವುದು. ಅವರು ಹೇಳುವರು, "ನೀವು ನೂಹ್(ಅ)ರ ಬಳಿಗೆ ಹೋಗಿರಿ. ಅವರು ಪ್ರಥಮ ಸಂದೇಶವಾಹಕರಾಗಿದ್ದಾರೆ. ಅವರನ್ನು ಲೋಕದ ಜನರ ಬಳಿಗೆ ಕಳುಹಿಸಿದ್ದನು."

ಜನರು ನೂಹ್(ಅ)ರ ಬಳಿಗೆ ಹೋಗಿ ಬಿನ್ನವಿಸುವರು. ಅವರು ಹೇಳುವರು, "ನಾನೂ ಏನೂ ಮಾಡಲಾರೆ. ನಾನು ನನ್ನ ಪ್ರಭುವಿನೊಡನೆ ನನಗೆ ತಿಳಿದಿಲ್ಲದ ಒಂದು ಬೇಡಿಕೆಯನ್ನಿಟ್ಟಿದ್ದೆ." ಅವರಿಗೆ ಸಂಕೋಚವಾಗುವುದು. ಅವರು ಹೇಳುವರು, "ನೀವು ರಹ್ಮಾನನ ಆಪ್ತರಾದ ಇಬ್ರಾಹೀಮ್(ಅ)ರ ಬಳಿಗೆ ಹೋಗಿರಿ."

ಹಾಗೆ ಜನರು ಇಬ್ರಾಹೀಮ್(ಅ)ರ ಬಳಿಗೆ ಹೋಗಿ ವಿನಂತಿಸುವರು. ಅವರು ಹೇಳುವರು, "ನಾನೂ ಏನೂ ಮಾಡಲಾರೆ. ನೀವು ಮೂಸಾ(ಅ)ರ ಬಳಿಗೆ ಹೋಗಿರಿ. ಅವರು ಅಲ್ಲಾಹನೊಡನೆ ನೇರವಾಗಿ ಮಾತನಾಡಿದವರಾಗಿದ್ದಾರೆ. ಅವರಿಗೆ ತೌರಾತ್ ಗ್ರಂಥವನ್ನು ನೀಡಿದ್ದಾನೆ."

ಜನರು ಮೂಸಾ(ಅ)ರ ಬಳಿಗೆ ಹೋಗುವರು. ಅವರು ಹೇಳುವರು, "ನಾನೂ ಏನೂ ಮಾಡಲಾರೆ. ಒಬ್ಬ ವ್ಯಕ್ತಿಯನ್ನು ನಾನು ವಿನಾಕಾರಣ ಕೊಂದಿದ್ದೆ. ಅವರು ತಮ್ಮ ಪ್ರಭುವಿನ ಮುಂದೆ ಹೋಗಲು ನಾಚಿಕೆ ಪಡುವರು. ಅವರು ಹೇಳುವರು, "ನೀವು ಈಸಾ(ಅ)ರ ಬಳಿಗೆ ಹೋಗಿರಿ. ಅವರು ಅಲ್ಲಾಹನ ದಾಸ ಮತ್ತು ಸಂದೇಶವಾಹಕರಾಗಿದ್ದಾರೆ. ಅಲ್ಲಾಹನ ವಚನ ಮತ್ತು ಅವನ ಆತ್ಮವಾಗಿದ್ದಾರೆ."

ಜನರು ಈಸಾ(ಅ)ರ ಬಳಿಗೆ ಹೋಗುವರು. ಅವರು ಹೇಳುವರು, "ನಾನೂ

ಏನೂ ಮಾಡಲಾರೆ. ನೀವು ಮುಹಮ್ಮದ್(ಸ)ರ ಬಳಿಗೆ ಹೋಗಿರಿ. ಅವರು ಹಿಂದಿನ ಮತ್ತು ಮುಂದಿನ ಎಲ್ಲ ಪಾಪಗಳು ಮನ್ನಿಸಲ್ಪಟ್ಟಿರುವ ಅಲ್ಲಾಹನ ದಾಸರಾಗಿದ್ದಾರೆ."

ಪ್ರವಾದಿ(ಸ) ಹೇಳುತ್ತಾರೆ: ಜನರು ನನ್ನ ಬಳಿಗೆ ಬರುವರು. ನಾನು ನನ್ನ ಪ್ರಭುವಿನ ಬಳಿಗೆ ಹೋಗುವೆನು. ಅವನ ಭೇಟಿಗೆ ಅನುಮತಿ ಕೇಳುವೆನು. ನನಗೆ ಅನುಮತಿ ಸಿಗುವುದು. ನನ್ನ ದೃಷ್ಟಿಯು ಅಲ್ಲಾಹನ ಮೇಲೆ ಬೀಳುತ್ತಿದ್ದಂತೆಯೇ ನಾನು ಸಾಷ್ಟಾಂಗದಲ್ಲಿ ಬೀಳುವೆನು. ಅಲ್ಲಾಹನು ನನ್ನನ್ನು ಅವನಿಚ್ಛಿಸುವ ತನಕ ಅದೇ ಅವಸ್ಥೆಯಲ್ಲಿ ಬಿಡುವನು.

ತರುವಾಯ ನನ್ನೊಂದಿಗೆ ಹೇಳಲಾಗುವುದು, "ನಿನ್ನ ತಲೆ ಎತ್ತು ಮತ್ತು ಬೇಡು. ನಿನಗೆ ನೀಡಲಾಗುವುದು. ನೀನು ಬಯಸುವುದನ್ನು ಕೇಳು. ಆಲಿಸಲಾಗುವುದು. ಶಿಫಾರಸ್ಸು ಮಾಡು, ಸ್ವೀಕರಿಸಲಾಗುವುದು."

ಆಗ ನಾನು ತಲೆ ಎತ್ತುವೆನು. ಅಲ್ಲಾಹನು ನನಗೆ ಕಲಿಸುವ ಪದಗಳಿಂದ ನಾನು ಅವನನ್ನು ಸ್ತುತಿಸುವೆನು. ತರುವಾಯ ನಾನು ಶಿಫಾರಸ್ಸು ಮಾಡುವೆನು. ನನಗೆ ಒಂದು ಗಡಿ ನಿಶ್ಚಯಿಸಲಾಗುವುದು. ನಾನು ಅಷ್ಟೂ ಮಂದಿಯನ್ನು ಸ್ವರ್ಗಕ್ಕೆ ಕಳುಹಿಸುವೆನು. ನಾನು ಪುನಃ ಅಲ್ಲಾಹನ ಬಳಿಗೆ ಹೋಗುವೆನು. ನನ್ನ ಪ್ರಭುವನ್ನು ನೋಡಿದ ಕೂಡಲೇ ಮೊದಲಿನಂತೆ (ಸಾಷ್ಟಾಂಗ) ಬೀಳುವೆನು. ಪುನಃ ಶಿಫಾರಸ್ಸು ಮಾಡುವೆನು. ನನಗೆ ಆಗಲೂ ಒಂದು ಗಡಿ ನಿಶ್ಚಯಿಸಲಾಗುವುದು. ಆದರೊಳಗಿರುವವರನ್ನು ಸ್ವರ್ಗಕ್ಕೆ ಕಳುಹಿಸುವೆನು.

ತರುವಾಯ ಮೂರನೆಯ ಬಾರಿಯೂ ನಾಲ್ಕನೆಯ ಬಾರಿಯೂ ಹಾಗೆ ಮಾಡುವೆನು. ಅನಂತರ ನಾನು ಹೇಳುವೆನು, "ಇನ್ನು ನರಕದಲ್ಲಿ ಕುರ್‌ಆನ್ ತಡೆದಿರುವಂತಹವರು ಮಾತ್ರ ಉಳಿದಿರುವರು. ನರಕದಲ್ಲಿರುವುದೇ ಅವರ ಶಾಶ್ವತ ವಿಧಿಯಾಗಿರುವುದು." **(ಬುಖಾರಿ, ಮುಸ್ಲಿಮ್, ತಿರ್ಮಿದಿ, ಇಬ್ನುಮಾಜಃ)**

ಬುಖಾರಿಯ ಇನ್ನೊಂದು ಹದೀಸ್‌ನಲ್ಲಿ ಹೀಗಿದೆ: ಪ್ರವಾದಿ(ಸ) ಹೇಳಿದರು, "ಹೃದಯದಲ್ಲಿ ಜೋಳದ ಗಾತ್ರದಷ್ಟು ಒಳಿತಿರುವ ಮತ್ತು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳಿದ್ದ ಪ್ರತಿಯೊಬ್ಬನೂ ನರಕದಿಂದ ಹೊರ ಬರುವನು. ಆ ಬಳಿಕ ಹೃದಯದಲ್ಲಿ ಗೋಧಿ ಗಾತ್ರದಷ್ಟು ಒಳಿತಿರುವ ಮತ್ತು 'ಲಾ ಇಲಾಹ ಇಲ್ಲಲ್ಲಾಹ್' ಹೇಳಿದ್ದ ಪ್ರತಿಯೊಬ್ಬನೂ ನರಕದಿಂದ ಹೊರ ಬರುವನು. ಕೊನೆಯಲ್ಲಿ ಹೃದಯದಲ್ಲಿ ಅಣುಗಾತ್ರದಷ್ಟು ಒಳಿತಿರುವ ಮತ್ತು 'ಲಾ ಇಲಾಹ ಇಲ್ಲಲ್ಲಾಹ್' ಹೇಳಿದ್ದ ಪ್ರತಿಯೊಬ್ಬನೂ ಹೊರ ಬರುವನು."

37. ಸ್ವರ್ಗದ ಅಜ್ಞಾತ ಅನುಗ್ರಹಗಳು

عَنْ أَبِيْ هُرَيْرَةَ رَضِيَ اللّٰهُ عَنْهُ ، قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ: قَالَ اللّٰهُ :" اَعْـدَدْتُ لِعِبَادِىَ الصَّالِحِيْنَ مَالَا عَيْنٌ رَأَتْ ، وَلَا اُذُنٌ سَمِعَتْ ، وَلَا خَطَرَ عَلٰى قَلْبِ بَشَرٍ-" فَاقْرَأُوْا اِنْ شِئْتُمْ: فَلَا تَعْلَمُ نَفْسٌ مَا اُخْفِيَ لَهُمْ مِنْ قُرَّةِ اَعْيُنٍ-

رواه البخارى (وكذلك مسلم والترمذى وابن ماجه)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಕೇಳುತ್ತಾನೆ, "ನಾನು ನನ್ನ ನಿಷ್ಠದಾಸರಿಗೆ (ಸ್ವರ್ಗದಲ್ಲಿ) ಯಾವ ಕಣ್ಣೂ ಕಂಡಿರದ, ಯಾವ ಕಿವಿಯೂ ಕೇಳಿರದ ಮತ್ತು ಯಾವ ಹೃದಯವೂ ಕಲ್ಪಿಸಿರದಂತಹವುಗಳನ್ನು (ಅನುಗ್ರಹಗಳನ್ನು) ಸಿದ್ಧಗೊಳಿಸಿಟ್ಟಿರುತ್ತೇನೆ. ನೀವು ಬಯಸುವುದಾದರೆ ಈ ಸೂಕ್ತವನ್ನು ಪಠಿಸಿರಿ[1]-

ಮುಂದೆ ಅವರ ಕರ್ಮಗಳಿಗೆ ಪ್ರತಿಫಲವಾಗಿ ಅವರ ಕಣ್ಮನಗಳನ್ನು ತಣಿಸುವಂತಹ ಯಾವ ಸತ್ಫಲಗಳನ್ನು ಅವರಿಗಾಗಿ ಬಚ್ಚಿಡಲಾಗಿದೆಯೋ ಅದರ ಅರಿವು ಯಾವ ಜೀವಿಗೂ ಇಲ್ಲ." **(ಬುಖಾರಿ, ಮುಸ್ಲಿಮ್, ತಿರ್ಮಿದಿ, ಇಬ್ನುಮಾಜಃ)**

38. ಸ್ವರ್ಗವು ಸಂಕಷ್ಟಗಳಿಂದಲೂ ನರಕವು ಸುಖ-ಸಂತೋಷಗಳಿಂದಲೂ ಆವರಿಸಲ್ಪಟ್ಟಿದೆ

عَنْ اَبِيْ هُـرَيْرَةَ رَضِيَ اللّٰهُ عَنْهُ، عَنْ رَسُوْلِ اللّٰهِ صَلَّى اللّٰهُ عَلَيْهِ وَسَلَّمَ ، قَالَ : "لَمَّا خَلَقَ اللّٰهُ الْجَنَّةَ وَالنَّارَ، أَرْسَلَ جِبْرِيْلَ اِلَى الْجَنَّةِ فَقَالَ : أُنْظُرْ اِلَيْهَا ، وَاِلٰى مَا أَعْدَدْتُ لِأَهْلِهَا فِيْهَا- قَالَ: فَجَاءَ هَا

وَنَظَرَ اِلَيْهَا وَاِلٰى مَا أَعَدَّ اللّٰهُ لِأَهْلِهَا فِيْهَا۔ قَالَ : فَرَجَعَ اِلَيْهِ ، قَالَ : فَوَعِزَّتِكَ لَا يَسْمَعُ بِهَا أَحَدٌ ، اِلَّا دَخَلَهَا فَأَمَرَ بِهَا فَحُفَّتْ بِالْمَكَارِهِ ، فَقَالَ : ارْجِعْ اِلَيْهَا ، فَانْظُرْ اِلٰى مَا أَعْدَدْتُ لِأَهْلِهَا فِيْهَا قَالَ : فَرَجَعَ اِلَيْهَا ، فَاِذَا هِيَ قَدْ حُفَّتْ بِالْمَكَارِهِ ، فَرَجَعَ اِلَيْهَا ، فَقَالَ : وَعِزَّتِكَ لَقَدْ خِفْتُ أَنْ لَّا يَدْخُلَهَا أَحَدٌ۔ قَالَ : أُذْهَبْ اِلَى النَّارِ فَانْظُرْ اِلَيْهَا ، وَاِلٰى مَا أَعْدَدْتُ لِأَهْلِهَا فِيْهَا۔ فَاِذَا هِيَ يَرْكَبُ بَعْضُهَا بَعْضًا فَرَجَعَ اِلَيْهِ ، فَقَالَ : وَعِزَّتِكَ لَا يَسْمَعُ بِهَا أَحَدٌ فَيَدْخُلَهَا ۔ فَأَمَرَ بِهَا فَحُفَّتْ بِالشَّهْوَاتِ ، فَقَالَ : ارْجِعِ اِلَيْهَا ، فَرَجَعَ اِلَيْهَا ، فَقَالَ : وَعِزَّتِكَ لَقَدْ خَشِيْتُ أَنْ لَا يَنْجُرَ مِنْهَا أَحَدٌ اِلَّا دَخَلَهَا۔"

رواه الترمذی وقال حديث حسن صحيح (وكذلك ابو داؤد النسائی)

ಅಬೂಹುರೈರಾರಿಂದ ವರದಿ. ಪ್ರವಾದಿ(ಸ) ಹೇಳಿದರು:

ಅಲ್ಲಾಹನು ಸ್ವರ್ಗ ಮತ್ತು ಸ್ವರ್ಗದ ಅನುಗ್ರಹಗಳನ್ನು ಸೃಷ್ಟಿಸಿದಾಗ ಜಿಬ್ರೀಲ್(ಅ)ರನ್ನು ಸ್ವರ್ಗದಡೆಗೆ ಕಳುಹಿಸಿ ಹೇಳಿದನು, "ಸ್ವರ್ಗವನ್ನೂ ಅದರ ಅನುಗ್ರಹಗಳನ್ನೂ ನೋಡು. ವಿಶ್ವಾಸಿಗಳಿಗಾಗಿ ಅದನ್ನು ಸಿದ್ಧಗೊಳಿಸಿಟ್ಟಿರುತ್ತೇನೆ." ಪ್ರವಾದಿ(ಸ) ಹೇಳಿದರು: ಜಿಬ್ರೀಲ್(ಅ) ಸ್ವರ್ಗಕ್ಕೆ ಹೋಗಿ ಅದನ್ನೂ ಅದರ ಅನುಗ್ರಹಗಳನ್ನೂ ನೋಡಿ ಬಂದರು.

ಪ್ರವಾದಿ(ಸ) ಹೇಳಿದರು: ಅವರು ಅಲ್ಲಾಹನ ಬಳಿಗೆ ಬಂದು ಹೇಳಿದರು, "ನಿನ್ನ ಪ್ರತಾಪದಾಣೆ! ಸ್ವರ್ಗದ ಕುರಿತು ಕೇಳಿದವರೆಲ್ಲ ಅದರಲ್ಲಿ ಪ್ರವೇಶ ಪಡೆಯಲು ಗರಿಷ್ಠ ಪ್ರಯತ್ನಿಸುವರು." ಅಲ್ಲಾಹನು ಸ್ವರ್ಗಕ್ಕೆ ಅಪ್ಪಣೆ ಕೊಟ್ಟನು. ಅದನ್ನು ಸಂಕಷ್ಟಗಳಿಂದ ಸುತ್ತುವರಿದನು. ತರುವಾಯ ಅಲ್ಲಾಹನು ಜಿಬ್ರೀಲ್‌ರನ್ನು ಕರೆದು, "ಹೋಗು ಸ್ವರ್ಗದ ಕಡೆಗೆ. ನಾನು ಸ್ವರ್ಗದಲ್ಲಿ ಸ್ವರ್ಗವಾಸಿಗಳಿಗೆ ಏನೆಲ್ಲ ಸಿದ್ಧಗೊಳಿಸಿಟ್ಟಿದ್ದೇನೆಂದು ನೋಡು."

ಅವರು ಸ್ವರ್ಗದ ಕಡೆಗೆ ಹೋದರು. ಅದು ಸತ್ವಪರೀಕ್ಷೆಗಳಿಂದ ತುಂಬಿತ್ತು. ಅದನ್ನು ನೋಡಿ ಮರಳಿ ಬಂದು ಅವರು ಹೇಳಿದರು, "ನಿನ್ನ ಪ್ರತಾಪದಾಣೆ! ಇನ್ನು ಯಾರೂ ಸ್ವರ್ಗಕ್ಕೆ ಹೋಗಲಾರರೋ ಎಂದು ನಾನು ಭಯಪಡುತ್ತೇನೆ."

ಅಲ್ಲಾಹನು ಹೇಳಿದನು, "ನರಕದ ಕಡೆಗೆ ಹೋಗು. ಅದನ್ನೂ ನರಕವಾಸಿಗಳಿಗೆ ಅದರಲ್ಲಿ ಸಿದ್ಧಗೊಳಿಸಿಟ್ಟಿರುವುದನ್ನೂ ನೋಡು." ಅವರು ಹೋಗಿ ನೋಡುವುದೇನು! ನರಕಾಗ್ನಿಯು (ಬೆಂಕಿಯ ಜ್ವಾಲೆಗಳು) ಒಂದರ ಮೇಲೊಂದರಂತೆ ಏರಿ ಬರುತ್ತಿದ್ದುವು.

ಜಿಬ್ರೀಲ್ ಅಲ್ಲಾಹನ ಬಳಿ ಬಂದು ಹೇಳಿದರು, "ನಿನ್ನ ಪ್ರತಾಪದಾಣೆ! ನರಕದ ಬಗ್ಗೆ ಕೇಳಿದವರೆಲ್ಲರೂ ಅದರೊಳಗೆ ಪ್ರವೇಶಿಸಲಾರರು." ತರುವಾಯ ಅಲ್ಲಾಹನು ನರಕಕ್ಕೆ ಆಜ್ಞಾಪಿಸಿದಾಗ, ಅದು ವಿಷಯಾಸಕ್ತಿ ಮತ್ತು ಚಿತ್ತಾಕಾಂಕ್ಷೆಗಳಿಂದ ತುಂಬಿಕೊಂಡಿತು.

ಆ ಬಳಿಕ ಅಲ್ಲಾಹನು ಹೇಳಿದನು, "ಇನ್ನೊಮ್ಮೆ ನರಕದ ಕಡೆಗೆ ಹೋಗು." ಜಿಬ್ರೀಲ್(ಅ) ಮತ್ತೊಮ್ಮೆ ನರಕದ ಕಡೆಗೆ ಹೋದರು ಮತ್ತು ಮರಳಿ ಬಂದು ಹೇಳಿದರು, "ನಿನ್ನ ಪ್ರತಾಪದಾಣೆ! ಬಹುಶಃ ಯಾರೂ ನರಕದಿಂದ ಪಾರಾಗಲಾರರೆಂದು ನಾನು ಭಾವಿಸುತ್ತೇನೆ." **(ತಿರ್ಮಿದಿ, ಅಬೂದಾವೂದ್, ನಸಾಈ)**

39. ಸ್ವರ್ಗ–ನರಕಗಳನ್ನು ತುಂಬಿಸುವುದು ನನ್ನ ಕೆಲಸ

عَنْ أَبِىْ سَعِيْدِ الْخُدْرِىْ رَضِىَ اللّٰهُ عَنْهُ ، عَنِ النَّبِيِّ صَلَّى اللّٰهُ عَلَيْهِ وَسَلَّمَ قَالَ: "اِحْتَجَّتِ الْجَنَّةُ وَالنَّارُ- فَقَالَتِ النَّارُ: فِيَّ الْجَبَّارُوْنَ وَالْمُتَكَبِّرُوْنَ- وَقَالَتِ الْجَنَّةُ : فِيَّ ضُعَفَاءُ النَّاسِ وَمَسَاكِيْنُهُمْ ، فَقَضَى اللّٰهُ بَيْنَهُمَا : اِنَّكَ الْجَنَّةُ رَحْمَتِىْ أَرْحَمُ بِكَ مَنْ أَشَاءُ ، وَاِنَّكِ النَّارُ عَذَابِىْ أُعَذِّبُ بِكَ مَنْ أَشَاءُ ، وَلِكِلَيْكُمَا عَلَىَّ مِلْؤُهَا-" رواه مسلم (وكذلك البخارى والترمذى)

ಅಬೂ ಸಈದ್ ಖುದ್ರೀ(ರ) ವರದಿ ಮಾಡುತ್ತಾರೆ. ಪ್ರವಾದಿ(ಸ) ಹೇಳಿದರು:

ಸ್ವರ್ಗ-ನರಕಗಳು ಪರಸ್ಪರ ಜಗಳಾಡಿದವು. ನರಕ ಹೇಳಿತು, “ನನ್ನೊಡಲಲ್ಲಿ ಮಹಾ ಮಹಾ ಕ್ರೂರಿಗಳೂ ದುರಹಂಕಾರಿಗಳೂ ಇದ್ದಾರೆ.” ಸ್ವರ್ಗ ಹೇಳಿತು, “ನನ್ನಲ್ಲಿ ದುರ್ಬಲರೂ ಬಡವರೂ ಇದ್ದಾರೆ.”

ಅಲ್ಲಾಹನು ಅವೆರಡರ ನಡುವೆ ತೀರ್ಮಾನ ಮಾಡುತ್ತಾ ಸ್ವರ್ಗದೊಂದಿಗೆ ಹೇಳಿದನು, “ಓ ಸ್ವರ್ಗವೇ! ನೀನು ನನ್ನ ಕರುಣೆ(ಯ ದ್ಯೋತಕ) ಆಗಿರುವೆ. ನಿನ್ನ ಮೂಲಕ ನಾನಿಚ್ಛಿಸಿದವರ ಮೇಲೆ ಕರುಣೆ ತೋರುವೆನು.”

ನರಕದೊಡನೆ ಹೇಳಿದನು, “ನೀನು ನನ್ನ ಯಾತನೆ(ಯ ಸಂಕೇತ) ಆಗಿರುವೆ. ನಿನ್ನ ಮೂಲಕ ನನಗಿಷ್ಟಬಂದವರನ್ನು ಶಿಕ್ಷಿಸುವೆನು. ನಿಮ್ಮಿರ್ವರನ್ನೂ ತುಂಬಿಸುವುದು ನನ್ನ ಹೊಣೆಯಾಗಿದೆ.”

(ಮುಸ್ಲಿಮ್, ಬುಖಾರಿ, ತಿರ್ಮಿದಿ)

40. ಅಲ್ಲಾಹನ ಸಂಪ್ರೀತಿ: ಸ್ವರ್ಗವಾಸಿಗಳ ಅತಿದೊಡ್ಡ ಅನುಗ್ರಹ

عَنْ أَبِيْ سَعِيْدٍ الْخُدْرِيْ رَضِيَ اللّٰهُ عَنْهُ، قَالَ: قَالَ النَّبِيُّ صَلَّى اللّٰهُ عَلَيْهِ وَسَلَّمَ: "اِنَّ اللّٰهَ يَقُوْلُ لِأَهْلِ الْجَنَّةِ: يَاأَهْلَ الْجَنَّةِ فَيَقُوْلُوْنَ لَبَّيْكَ رَبَّنَا وَسَعْدَيْكَ، وَالْخَيْرُ فِيْ يَدَيْكَ، فَيَقُوْلُ: هَلْ رَضِيْتُمْ، فَيَقُوْلُوْنَ: وَمَا لَنَا لَا نَرْضٰى يَا رَبِّ، وَقَدْ أَعْطَيْتَنَا مَا لَمْ تُعْطِ أَحَدًا مِنْ خَلْقِكَ فَيَقُوْلُ: أَلَا أُعْطِيْكُمْ أَفْضَلَ مِنْ ذٰلِكَ؟ فَيَقُوْلُوْنَ: يَا رَبِّ وَأَيُّ شَيْءٍ أَفْضَلَ مِنْ ذٰلِكَ؟ فَيَقُوْلُوْنَ أُحِلَّ عَلَيْكُمْ رِضْوَانِيْ، فَلَا أَسْخَطُ عَلَيْكُمْ بَعْدَهُ أَبَدًا."

رواه البخارى (وكذلك مسلم والترمذى)

ಅಬೂ ಸಈದ್ ಖುದ್ರೀ(ರ) ವರದಿ ಮಾಡುತ್ತಾರೆ. ಪ್ರವಾದಿ(ಸ) ಹೇಳಿದರು:

ಸ್ವರ್ಗದಲ್ಲಿರುವವರನ್ನು ಅಲ್ಲಾಹನು, "ಸ್ವರ್ಗವಾಸಿಗಳೇ!" ಎಂದು ಕರೆಯುವನು. ಅವರು ಹೇಳುವರು, "ನಮ್ಮ ಪ್ರಭೂ! ನಾವಿದೋ ನಿನ್ನ ಸನ್ನಿಧಿಯಲ್ಲಿದ್ದೇವೆ. ನಿನ್ನ ಸಂಪ್ರೀತಿಯನ್ನು ಬಯಸುತ್ತೇವೆ. ಸರ್ವ ಒಳಿತುಗಳೂ ನಿನ್ನ ಕೈಯಲ್ಲಿವೆ." ಅಲ್ಲಾಹನು ಕೇಳುವನು, "ನೀವು ಸಂತೃಪ್ತರಾಗಿರುವಿರಾ?" ಅವರು ಹೇಳುವರು, "ನಮ್ಮ ಪ್ರಭೂ! ನಾವು ನಿನ್ನಿಂದ ಸಂತೃಪ್ತರಾಗದೇನು? ನಿನ್ನ ಸೃಷ್ಟಿಗಳ ಪೈಕಿ ಯಾರಿಗೂ ನೀಡಿಲ್ಲದಂತಹ ಬಹುಮಾನಗಳನ್ನೂ ಗೌರವವನ್ನೂ ನೀನು ನಮಗೆ ನೀಡಿದೆಯಲ್ಲವೇ?" ಅಲ್ಲಾಹನು ಹೇಳುವನು, "ನಾನು ಅವೆಲ್ಲಕ್ಕಿಂತಲೂ ಶ್ರೇಷ್ಠವಾದುದನ್ನು ನಿಮಗೆ ನೀಡಲೇ?" ಅವರು ಹೇಳುವರು, "ನಮ್ಮ ಪ್ರಭೂ! ಅದಕ್ಕಿಂತಲೂ ಶ್ರೇಷ್ಠವಾದುದು ಯಾವುದಾಗಿರಬಹುದು?" ಅಲ್ಲಾಹನು ಹೇಳುವನು, "ನಾನು ನಿಮ್ಮ ಮೇಲೆ ನನ್ನ ಸಂಪ್ರೀತಿಯನ್ನು ಸುರಿಸುವೆನು. ಅನಂತರ ನಿಮ್ಮೊಂದಿಗೆ ಎಂದಿಗೂ ಕೋಪಗೊಳ್ಳಲಾರೆ."

(ಬುಖಾರಿ, ಮುಸ್ಲಿಮ್, ತಿರ್ಮಿದಿ)

❖ ❖ ❖ ❖